

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 265 Monday 11-03-2024 E-mail : maruti.b.hosamani76@gmail.com Page: 4 Price : Rs. 1/-


## ಬಹುದಿನದ ಬೇಡಿಕೆ ಈಡೇರಿಸಿದ: ಶಾಸಕ ರಾಜುಗೌಡ ಪಾಟೀಲ



**ಯಲಗೋಡ** : ವಿಜಯಪುರ ಜಿಲ್ಲೆಯ ದೇವರ ಹಿಪ್ರರಗಿ ವಿಧಾನ ಸಭಾ ಮತಕ್ಷೇತ್ರದ ಕಲಕೇರಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ. ಭೂಮಿ ಪೂಜೆ ಸಮಾರಂಭ ಸನ್ಮಾನ್ಯ ರಾಜುಗೌಡ ಪಾಟೀಲ ಮಾನ್ಯ ಜನಪ್ರಿಯ ಶಾಸಕರು ದೇವರ ಹಿಪ್ಪರಗಿ ವಿಧಾನ ಸಭಾ ಮತಕ್ಷೇತ್ರದ.

ಪರಮ ಪೂಜ್ಯ ಶ್ರೀ ಷ.ಬ್ರ. ಗುರು ಮಡಿವಾಳೇಶ್ವರ ಶಿವಾಚಾರ್ಯರ ಇವರ ನೇತೃತ್ವದಲ್ಲಿ ಭೂಮಿ ಪೂಜೆ ಸಮಾರಂಭ ನೆರವೇರಿತು. ಲ್ಯಾಂಡ್ ಆರ್ಮಿ ಡಿಪಾರ್ಟ್ಮೆಂಟ್ ದಿಂದ ಸಿಸಿ ರಸ್ತೆ ಕಾಮಗಾರಿ ಇವರ ನೇತೃತ್ವದಲ್ಲಿ ಚಾಲನೆ ನೀಡಿದರು. ಜೆಡಿಎಸ್ ಪಕ್ಷದ ಎಲ್ಲಾ ಕಾರ್ಯಕರ್ತರು ಊರಿನ ಹಿರಿಯರು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ ತಾಳಿಕೋಟೆ**

## ಮಾಜಿ ಶಾಸಕ ಟಿ.ಎಚ್.ಶಿವಶಂಕರಪ್ಪ ನಿಧನಕ್ಕೆ ಸಂತಾಪ



**ತರೀಕೆರೆ** : ತರೀಕೆ-ರೆ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಟಿ ಹೆಚ್ ಶಿವಶಂಕರಪ್ಪ ರವರು ಇಂದು ಬೆಳಗ್ಗೆ ಎಂಟು ಮೂವತ್ತರ ಸಮಯದಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೂತ್ರಪಿಂಡಗಳ ವೈಫಲ್ಯದಿಂದ ನಿಧನರಾಗಿರುತ್ತಾರೆ. ಅವರು ಶಾಸಕರಾಗಿದ್ದ ಅವಧಿಯಲ್ಲಿ ಬಡ ಜನರ ಪರವಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿರುತ್ತಾರೆ, ತರೀಕೆರೆಯ ಜಿಲ್ಲಾ ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಸೇವೆ ಮಾಡಿರುತ್ತಾರೆ, ಅವರ ಜನಪರವಾದ ಕೆಲಸಗಳು ಎಂದಿಗೂ ಸ್ಮರಣೀಯವಾದದ್ದು ಎಂದು ಜಿಲ್ಲಾ ಹಮಾಲಿ ಕಾರ್ಮಿಕರ ಸಂಘದ ಸದಸ್ಯರು ಕಂಬನಿ ಮಿಡಿದಿದ್ದಾರೆ. ಭಾರತೀಯ ಜನತಾ ಪಕ್ಷದ ಮುಖಂಡರಾದ ಆರ್ ದೇವಾನಂದ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರಾದ ತರೀಕೆರೆ ಎನ್ ವೆಂಕಟೇಶ್, ಹಮಾಲಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಕೆ ರಾಜು, ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷರಾದ ಬಿ ಕೃಷ್ಣನಾಯಕ್, ಮುಂತಾದವರು ಸಂತಾಪ ಸೂಚಿಸಿದ್ದಾರೆ ಅವರ ಅಗಲಿಕೆಯನ್ನು ತಡೆಯುವ ಶಕ್ತಿ ಅವರ ಕುಟುಂಬದವರಿಗೆ ಆ ದೇವರು

ಕರುಣಿಸಲಿ ಎಂದು ಭಗವಂತನನ್ನು ಪ್ರಾರ್ಥಿಸಿದ್ದಾರೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್.ವೆಂಕಟೇಶ್. ತರೀಕೆರೆ**

## ಜಿಲ್ಲೆಯಲ್ಲಿಯೇ ಹುನಗುಂದ, ಇಲಕಲ್ಲನಿಂದ ಸರ್ಕಾರಕ್ಕೆ ಹೆಚ್ಚಿನ ವಿದ್ಯುತ್ ತೆರಿಗೆ-ಶೀಘ್ರದಲ್ಲಿಯೇ 220 ಕೆವ್ಹಿ ಸ್ಟೇಶನ್ ಆರಂಭ

**ಹುನಗುಂದ** : ಹುನಗುಂದ ಪಟ್ಟಣಕ್ಕೆ ಹೆಸ್ಕಾಂ ವಿಭಾಗ ಕಚೇರಿಯನ್ನು ತರೆಯಲು ಸದನದಲ್ಲಿ ಮಾತಾನಾಡಿದ್ದೇನೆ ಮತ್ತು ವೈಯಕ್ತಿಕವಾಗಿ ಮುಖ್ಯಮಂತ್ರಿಗಳನ್ನು ಹಾಗೂ ಇಂಧನ ಇಲಾಖೆಯ ಸಚಿವರೊಂದಿಗೆ ಮನವಿ ಕೂಡಾ ಮಾಡಿದ್ದೇನೆ ನನಗೆ ವಿಶ್ವಾಸವಿದೆ. ಈ ವರ್ಷದ ಅಂತ್ಯಕ್ಕೆ ಹುನಗುಂದದಲ್ಲಿ ವಿಭಾಗ ಕಚೇರಿ ಆರಂಭಲಾಗುವುದು ಎಂದು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಶನಿವಾರ ಪಟ್ಟಣದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಕಚೇರಿ ಆವರಣದಲ್ಲಿ ಹುನಗುಂದ ಉಪ ವಿಭಾಗ ನೂತನ ಕಚೇರಿ ಕಟ್ಟಡ, 33 ಕೆವ್ಹಿ ಕರಡಿ ಉಪ ವಿದ್ಯುತ್ ವಿತರಣಾ ಕೇಂದ್ರ ಹೆಚ್ಚುವರಿ, 5 ಎಂವಿಎ ಪವರ್ ಟ್ರಾನ್ಸಫರ್ಮರ್ ಅಳವಡಿಕೆ ಹಾಗೂ ವಿದ್ಯುತ್ ಮಾಪಕ ಬಾಹ್ಯ ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹುನಗುಂದ ಮತ್ತು ಇಳಕಲ್ಲ ಅವಳಿ ತಾಲೂಕಿನಲ್ಲಿ 1 ಲಕ್ಷ 28 ಸಾವಿರ ಜನ ಗ್ರಾಹಕರಿದ್ದಾರೆ.ಬಾಗಲಕೋಟಿ ಜಿಲ್ಲೆಯಲ್ಲಿಯೇ ಸರ್ಕಾರಕ್ಕೆ ಅತೀ ಹೆಚ್ಚು ತೆರಿಗೆ ಕಟ್ಟುವ ಏಕೈಕ ತಾಲೂಕಗಳಾಗಿದ್ದು. ಹುನಗುಂದ ಪಟ್ಟಣಕ್ಕೆ ಬಹುದಿನದ ಬೇಡಿಕೆಯಾಗಿದ್ದ ಉಪ ವಿಭಾಗ ಕಚೇರಿ ಮತ್ತು ಕಟ್ಟಡವನ್ನು ನನ್ನ ಕಳೆದ



ಅವಧಿಯಲ್ಲಿ ಮಂಜೂರು ಮಾಡಿಸಿ ಭೂಮಿ ಪೂಜೆ ಮತ್ತು ಅಡಿಗಲ್ಲು ಹಾಕಿದೆ ಮರಳಿ ನನ್ನಿಂದಲೇ ಉದ್ಘಾಟನೆ ಯಾಗುತ್ತಿರುವುದು ಸಂತಸ ತಂದಿದೆ. ಹುನಗುಂದ ಮತಕ್ಷೇತ್ರಕ್ಕೆ 220 ಕೆವ್ಹಿ ಸ್ಟೇಶನ್ ಅವಶ್ಯಕತೆ ಇದೆ.ಅದಕ್ಕಾಗಿ ಈಗಾಗಲೇ 20 ಎಕರೆ ಜಮೀನ ಕೂಡಾ ಖರೀದಿಯಾಗಿದೆ ಅದನ್ನು ಶೀಘ್ರದಲ್ಲಿಯೇ ಮಂಜೂರಾತಿಯಾಗುತ್ತೇ ಅದನ್ನು ಕೂಡಾ ಆರಂಭಿಸಲಾಗುವುದು.ಕಳೆದ ನನ್ನ ಅವಧಿಯಲ್ಲಿ ಕಂದಗಲ್ಲ ಗ್ರಾಮದಲ್ಲಿ 33 ಕೆವ್ಹಿ ಸ್ಟೇಶನ್ ಆರಂಭಿಸಲಾಗಿತ್ತು.ಸಧ್ಯ ಹಾವರಗಿ,ಹುಲಿಗಿನಾಳ,ಐಹೊಳೆ,ಮುಗನೂರಗಳಲ್ಲಿ 110 ಕೆವ್ಹಿ ಸ್ಟೇಶನ್ ಆಗಬೇಕು ಅಂತಾ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವಣೆಯನ್ನು ಸಲ್ಲಿಲಾಗಿದೆ.ಅದು ಕೂಡಾ ಸಧ್ಯದಲ್ಲಿಯೇ ಆರಂಭಗೊಳಲಿವೆ.ಸಧ್ಯ ನಮ್ಮ ಸರ್ಕಾರ ನೇಕಾರರಿಗೆ 10 ಎಚ್ಪಿ ಉಚಿತ ವಿದ್ಯುತ್,ರೈತರಿಗೆ 7 ತಾಸು ರೈತರಿಗೆ ಒದಗಿಸಲಾಗುತ್ತದೆ ಎಂದರು.

ಬಾಗಲಕೋಟ ಹೆಸ್ಕಾಂ ಅಧೀಕ್ಷಕ ಅಭಿಯಂತರ ಸುನೀಲ ಯಳಸಂಗಿ ಮತ್ತು ಹುನಗುಂದ ಹೆಸ್ಕಾಂ ಎಇಇ ಪ್ರಕಾಶ ಪೋಚಗುಂಡಿ ಮಾತನಾಡಿ ಹುನಗುಂದ ಪಟ್ಟಣಕ್ಕೆ ಉಪ ವಿಭಾಗ ಕಚೇರಿ ಬಹಳ ಅವಶ್ಯವಾಗಿತ್ತು. ಅದು ಇಂದು ಸಕಾರಗೊಂಡಿದೆ. ಆದರೆ ಹುನಗುಂದ ಪಟ್ಟಣಕ್ಕೆ ಒಂದು ವಿಭಾಗ ಕಚೇರಿ ಯಾಗುಬೇಕು ಅದು ನಮ್ಮ ಬೇಡಿಕೆ-ಯಾಗಿದೆ. ಅದನ್ನು ನಮ್ಮ ಶಾಸಕರು ಈಡೇರಿಸುತ್ತಾರೆ ಎನ್ನುವ ಭರವಸೆ ನಮಗಿದೆ. ಸೌರ ಶಕ್ತಿ ವಿದ್ಯುತ್ಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಚಾಲನೆಯನ್ನು ನೀಡುತ್ತಿದ್ದು.ಇನ್ನು ಮುಂದೆ ಬಾಗಲಕೋಟಿ ಜಿಲ್ಲೆಯ 17 ಸ್ಟೇಶನಿಂದ 61 ಫ್ಲೀಡರನಿಂದ ಕಾರ್ಯಾರಂಭವಾಗುತ್ತಿದೆ. ಈ ಬೇಸಿಗೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿದ್ಯುತ್ ಸಮಸ್ಯೆ ಯಾಗಬಹುದು. ಸಧ್ಯ ಸೋಲಾರ ವಿದ್ಯುತ್ ಅಳವಡಿಕೆ ಯಾಗುತ್ತಿರುವುದರಿಂದ ಮುಂದಿನ ಬೇಸಿಗೆ ವಿದ್ಯುತ್ ಸಮಸ್ಯೆ ಯಾಗುವುದಿಲ್ಲ ಎಂದರು. ಪವರ್ ಮ್ಯಾನ್ ದಿನಾಚರಣೆಯ ನಿಮಿತ್ಯ ಬಾಗಲಕೋಟಿ ಜಿಲ್ಲೆಯ ಎಲ್ಲಾ ಶಾಖೆಗಳ ಪವರ್ ಮ್ಯಾನ್( ಶಕ್ತಿಮಿತ್ರರು) ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಹುಬ್ಬಳ್ಳಿ ಹೆಸ್ಕಾಂ ನಿರ್ದೇಶಕ ಮತ್ತು ಆರ್ಥಿಕ ಅಧಿಕಾರಿ ಪ್ರಕಾಶ ಪಾಟೀಲ,ತಾ.ಪಂ ಇ.ಓ ಮುರಳೀಧರ ದೇಶಪಾಂಡೆ, ಹೆಸ್ಕಾಂ ಎಇಇ ಬಾಲಾಜಿಸಿಂಗ್, ಇಳಕಲ್ಲ ಎಇಇ ಚೇತನ ಹಾದಿಮನಿ, ಶಾಖಾಧಿಕಾರಿ ದತ್ತಾತ್ರೇಯ ದಾಯಿಗುಡಿ, ಮೇಘರಾಜ ಮಡಿವಾಳ, ಇಬ್ರಾಹಿಂ ಮ್ಯಾಗೇರ, ಗೋಪಾಲ ಪೂಜಾರಿ, ರಮೇಶ ನಾಯಕ, ಮುಖಂಡರಾದ ಶಿವಾನಂದ ಕಂಠಿ, ಮಹಾಂತೇಶ ಅವಾರಿ, ರವಿ ಹುಚನೂರ, ಸಂಗಣ್ಣ ಗಂಜೀಹಾಳ ಸೇರಿದ್ದಂತೆ ಕೆಇಬಿ ಸಿಬ್ಬಂದಿಗಳು ಮತ್ತು ಗುತ್ತಿಗೆದಾರರು ಮಹಾಂತೇಶ ಬಣ್ಣಾಕದಿನಿ ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ ಬಂಡರಗಲ್ಲ. ಹುನಗುಂದ**

## 21ನೇ ವರ್ಷದ ಸಿದ್ಧಾರೂಢರ ಜ್ಯೋತಿ ಪಾದಯಾತ್ರೆಗೆ ಚಾಲನೆ

**ಮಹಾಲಿಂಗಪುರ** : ಶಿವರಾತ್ರಿ ಜಾತ್ರಾ ಮಹೋತ್ಸವದ ನಿಮಿತ್ಯ ಸ್ಥಳೀಯ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದಿಂದ ಪ್ರತಿವರ್ಷ ಹುಬ್ಬಳ್ಳಿಗೆ ಸಾಗುವ ಜ್ಯೋತಿಯ 21ನೇ ವರ್ಷದ ಪಾದಯಾತ್ರೆಗೆ ರವಿವಾರ ಚಾಲನೆ ದೊರೆಯಿತು.

ರವಿವಾರ ಮುಂಜಾನೆ 7 ಗಂಟೆಗೆ ಶೃಂಗಾರಗೊಂಡ ಜ್ಯೋತಿ ಯಾತ್ರೆಗೆ ಪೂಜೆಸಲ್ಲಿಸುವುದರ ಮೂಲಕ ಸಹಜಾನಂದ ಸ್ವಾಮಿಗಳು ಚಾಲನೆ ನೀಡಿ ಮಾತನಾಡಿ, ನಮ್ಮ ಬ್ರಹ್ಮವಿದ್ಯಾಶ್ರಮದಿಂದ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ 20 ವರ್ಷಗಳಿಂದ ಪಾದಯಾತ್ರೆಯನ್ನು ಕೈಗೊಳ್ಳುತ್ತಾ ಬಂದಿದ್ದೇವೆ. ಈ ಪಾದಯಾತ್ರೆಯಲ್ಲಿ ಭಾಗವಹಿಸುವುದ-ರಿಂದ ಮನುಷ್ಯನ ಚಂಚಲಿತ ಮನಸ್ಸು ಪರಿಶುದ್ಧವಾಗಿ, ಆರೋಗ್ಯ ವೃದ್ಧಿಯೊಂದಿಗೆ ಮನಶಾಂತಿ ದೊರೆಯುತ್ತದೆ ಎಂದರು.

ಪಾದಯಾತ್ರೆ ಸಂಚಾಲಕರಾದ ರನ್ನಬೆಳಗಲಿಯ ಯೋಗಿರಾಜ ಸದಾಶಿವ ಗುರೂಜಿ ಮಾತನಾಡಿ ಈ ಪಾದಯಾತ್ರೆಯು ವಿವಿಧತೆಯಲ್ಲಿ ಏಕತೆಯನ್ನು ಸಾರುವದಾಗಿದೆ. ಇಲ್ಲಿ ಬಡವ-ಬಲ್ಲಿದ,ಮೇಲು-ಕೀಳು ಎಂಬಬೇಧ ಭಾವವಿಲ್ಲದೆ ಪರಸ್ಪರ ಸೇವಾ ಮನೋಭಾವದಿಂದ ಭಾಗವಹಿಸುತ್ತಿರುವುದ-ರಿಂದ ಇದೊಂದು ಶಾಂತಿಯಾತ್ರೆ ಹಾಗೂ ಅಪರೂಪದ ಪಾದಯಾತ್ರೆಯಾಗಿ ವರ್ಷದಿಂದ ವರ್ಷಕ್ಕೆ ಭಕ್ತರಲ್ಲಿ ಆಧ್ಯಾತ್ಮದ ಸಿಂಚನ ಮೂಡಿಸುತ್ತಿದೆ ಎಂದರು.



ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಿಂದ ಹೊರಟ ಪಾದಯಾತ್ರೆಯಲ್ಲಿ ಕಲಬುರ್ಗಿ ಜಿಲ್ಲೆಯ ಕಡಗಂಚಿ, ಬೆಳಗಾವಿ ಜಿಲ್ಲೆಯ ಯಕ್ಸಂಬಾ, ಖಾನಟ್ಟಿ ಹಾಗೂ ಬಾಗಲಕೋಟ ಜಿಲ್ಲೆಯ ಮಹಾಲಿಂಗಪುರ, ಹಿಪ್ಪರಗಿ, ಗದ್ಯಾಳ, ಮೇಟಗುಡ್ಡ, ಸೈದಾಪೂರ, ಸಂಗಾನಟ್ಟಿ, ಹೊಸೂರ, ಚಿಮ್ಮಡ, ಬನಹಟ್ಟಿ ಸೇ-ರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ 300ಕ್ಕೂ ಅಧಿಕ ಭಕ್ತರು ಮಹಾಲಿಂಗೇಶ್ವರ ದರ್ಶನ ಪಡೆದು ಅಕ್ಕಿಮರಡಿ ಮಾರ್ಗವಾಗಿ ಪ್ರಯಾಣ ಬೆಳಸಿದರು. ಯಾದವಾಡ, ಚಿಕ್ಕೊಪ್ಪ, ಚಂದರಗಿ, ಮುನ್ನೊಳ್ಳಿ, ಸವದತ್ತಿ, ಅಮ್ಮಿನಭಾವಿ, ರಾಯರ ಹೆಬ್ಬಳ್ಳಿ ಮಾರ್ಗವಾಗಿ ಮಾರ್ಚ 8ರ ಮಹಾಶಿವರಾತ್ರಿಯ ಮುಂಜಾನೆ 10ಕ್ಕೆ ಹುಬ್ಬಳ್ಳಿಯ ಸಿದ್ಧಾರೂಢ ಮಠ ತಲುಪಲಿದ್ದಾರೆ.

21ನೇ ವರ್ಷದ ಪಾದಯಾತ್ರೆ ಹೊರಟ ಸಹಜಾನಂದ ಸ್ವಾಮಿಜಿಯವರಿಗೆ ಸಜನಸಾಬ ಪೆಂಡಾರಿ, ನಬಿ ಯಕ್ಸಂಬಿ ಸೇರಿದಂತೆ ಪಟ್ಟಣದ ಇಸ್ಲಾಂ ಸಮಾಜದ ಹಿರಿಯರು ಮಾಲಾರ್ಪಣೆ ಮಾಡಿ ಪಾದಯಾತ್ರೆಯು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ನೂತನ ಉತ್ತರಾಧಿಕಾರಿ ಸಿದ್ದಾನಂದ ಭಾರತಿ ಸ್ವಾಮಿಜಿ, ಟ್ರಸ್ಟ್ ಕಮೀಟಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಮೋರೆ, ಧರ್ಮದರ್ಶಿಗಳಾದ ಮಲ್ಲಪ್ಪ ಕಟಗಿ, ಚೇತನ ಬಾ.ಹಾದಿಮನಿ, ಸದ್ಭಕ್ತರಾದ ಮಹಾಂತೇಶ ಘಟ್ನಟ್ಟಿ, ಪರಪ್ಪ ಹುದ್ದಾರ, ಶಂಕರಗೌಡ ಪಾಟೀಲ(ಹಿಪ್ಪರಗಿ), ಸುಭಾಸ ನಾಯಕ, ಸುರೇಶ ಕೆಂಪವಾಡ, ಶ್ರೀಕಾಂತ ಪರೀಟ, ಮಲ್ಲಪ್ಪ ಯಾದವಾಡ, ಮಹೇಶ ಬಡಿಗೇರ, ತುಕಾರಾಮ ಮಣ್ಣಿಕೇರಿ, ಅಲ್ಲಪ್ಪ ಕೋಣಿ, ದುಂಡಪ್ಪ ಚೌಗಲಾ, ಸಿದ್ದಪ್ಪ ಗಿಡ್ಡನ್ನವರ, ಸಿದ್ರಾಮ ರೊಡ್ಡನ್ನವರ, ಚನ್ನಪ್ಪ ಚಂಡೋಲ, ಮಹಾದೇವ ಬ್ಯಾಳಿ, ಬಾಗಪ್ಪ ಹನಗಂಡಿ, ಬಾಳಪ್ಪ ತುಪ್ಪದ, ಮುತ್ತಪ್ಪ ಸವದಿ, ಮಹಾಲಿಂಗ ಜಿಟ್ಟಿ, ಸದಾಶಿವ ಇಂಗಳಗಿ, ಉಮೇಶ ಮೇಟಿ, ಎಸ್.ಕೆ.ಗಿಂ-ಡೆ, ಸಿದ್ದು ದಢೂತಿ, ಕುಮಾರ ಉಳ್ಳಾಗಡ್ಡಿ, ಸಿದ್ರಾಮಯ್ಯ ಗೋಠೆ, ಮಹಾಲಿಂಗ ಹುದ್ದಾರ, ಮಲ್ಲಪ್ಪ ಬೆಳವಿ ಸೇರಿದಂತೆ ಹಲವರು ಇದ್ದರು.

## ದಿ ಮಹಾಲಿಂಗಪುರ ಅರ್ಬನ ಬ್ಯಾಂಕ್ ಫಲಿತಾಂಶ ಪ್ರಕಟ

### ಶೇಖರ ಅಂಗಡಿ ಪೆನಲ್‌ಗೆ 7 ಸ್ಥಾನ, ಮಹಾಲಿಂಗಪ್ಪ ಕೋಳಿಗುಡ್ಡ ಪೆನಲ್‌ಗೆ 5 ಸ್ಥಾನ

**ಮಹಾಲಿಂಗಪುರ** : ಬಾರಿ ಕುತೂಹಲ ಕೆರಳಿಸಿದ್ದ ಪಟ್ಟಣದ ದಿ ಮಹಾಲಿಂಗಪುರ ಅರ್ಬನ ಬ್ಯಾಂಕಿನ ನೂತನ ಆಡಳಿತ ಮಂಡಳಿಯ ಚುನಾವಣೆಯು ಕಳೆದ ವರ್ಷ ಡಿ.30ರಂದು ನಡೆದಿತ್ತು. ಮತ ಎಣಿಕೆಗೆ ಕೋರ್ಟ ತಡೆಯಾಜ್ಞೆ ಹಿನ್ನಲೆಯಲ್ಲಿ ಎರಡು ತಿಂಗಳ ತಡವಾಗಿ ರವಿವಾರ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಮತ ಎಣಿಕೆ ನಡೆಯಿತು.



ಬ್ಯಾಂಕಿನ ಒಟ್ಟು 12 ಸ್ಥಾನಗಳ ಚುನಾವಣೆಯಲ್ಲಿ 1 ಅವಿರೋಧ ಆಯ್ಕೆ ಆಗಿತ್ತು. ಉಳಿದ 11 ವಿವಿಧ ಕ್ಷೇತ್ರಗಳಿಗಾಗಿ ಒಟ್ಟು 21 ಜನರು ಸ್ಪರ್ಧಿಸಿದ್ದರು. ರವಿವಾರ ಮುಂಜಾನೆ 8ರಿಂದ ಸಂಜೆ 6 ಗಂಟೆವರೆಗೆ ಮತ ಎಣಿಕೆ ನಡೆಯಿತು.

ಸಾಮಾನ್ಯ ಕ್ಷೇತ್ರದಿಂದ ಮಹಾಲಿಂಗಪ್ಪ ಇಟ್ನಪ್ಪ ಕೋಳಿಗುಡ್ಡ, ಶೇಖರ ಬಸಪ್ಪ ಅಂಗಡಿ, ಗುರುಪಾದ ಶಂಕ್ರೆಪ್ಪ ಅಂಬಿ, ಫಕ್ರುದ್ದೀನ ಹಸನಸಾಹೇಬ ಕುಂಟೋಜಿ, ವೀರುಪಾಕ್ಷಯ್ಯಾ ಈರಯ್ಯಾ ಪಂಚಕಟ್ಟಿಮಠ, ಅಶೋಕ ಜಗದೀಶ ಅಂಗಡಿ, ಶ್ರೀಶೈಲ ರುದ್ರಪ್ಪ ಹಿಪ್ಪರಗಿ, ಹಿಂದುಳಿದ ಅ ವರ್ಗದ ಹೊಳೆಪ್ಪ ನಾಗಪ್ಪ ಹಿಪ್ಪರಗಿ, ಮಹಿಳಾ ಕ್ಷೇತ್ರದಿಂದ ಅಕ್ಷತಾ ವೀರಪ್ಪ ಹಲಗತ್ತಿ, ಲಕ್ಷ್ಮೀ ಬಸವರಾಜ ದಿನ್ನಿಮನಿ, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಗಿರಮಲ್ಲಪ್ಪ ರಾಮಪ್ಪ ಕಬಾಡಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಸ್. ಕೆ.ಸಾರವಾಡ ಘೋಷಿಸಿದರು.

ಅಂಗಡಿ ಬಣಕ್ಕೆ 7 ಸ್ಥಾನ : ಬ್ಯಾಂಕಿನ ನೂತನ ಆಡಳಿತ ಮಂಡಳಿ ಚುನಾವಣೆಯಲ್ಲಿ ಬ್ಯಾಂಕಿನ ಹಿಂದಿನ ಅಧ್ಯಕ್ಷ ಮಹಾಲಿಂಗಪ್ಪ ಕೋಳಿಗುಡ್ಡ ಹಾಗೂ ಶೇಖರ ಅಂಗಡಿ ಬಣದ ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು. ಒಂದು ಅವಿರೋಧ ಆಯ್ಕೆ ಹಾಗೂ 6 ಸ್ಥಾನಗಳ ಗೆಲುವಿನೊಂದಿಗೆ ಶೇಖರ ಅಂಗಡಿ ಬಣವು 7 ಸ್ಥಾನಗಳನ್ನು ಗೆಲ್ಲುವ ಮೂಲಕ ಬ್ಯಾಂಕಿನ ಆಡಳಿತ ಚುಕ್ಕಾಣಿ ಹಿಡಿಯಲಿದೆ.

ಕೋಳಿಗುಡ್ಡ ಬಣಕ್ಕೆ 5 ಸ್ಥಾನ : ಕಳೆದ ನಾಲ್ಕು ಅವಧಿಗೆ ಬ್ಯಾಂಕಿನ ಅಧ್ಯಕ್ಷರಾಗಿದ್ದ ಮಹಾಲಿಂಗಪ್ಪ ಕೋಳಿಗುಡ್ಡ ಬಣವು 5 ಸ್ಥಾನಗಳನ್ನು ಗೆಲ್ಲುವ ಮೂಲಕ ಪ್ರತಿಪಕ್ಷ ಸ್ಥಾನಕ್ಕೆ ತೃಪ್ತಿಪಡುವಂತಾಗಿದೆ.

ಫಲಿತಾಂಶದ ನಂತರ ಚುನಾಯಿತ ಪ್ರತಿನಿಧಿಗಳ ಬೆಂಬಲಿಗರು ಪಟಾಕಿ ಸಿಡಿಸಿ ಗೆಲುವಿನ ಸಂಭ್ರಮಾಚರಣೆ ನಡೆಸಿದರು.

ಸಹಾಯಕ ಚುನಾವಣಾಧಿಕಾ-ರಿಗಳಾದ ಸಿದಗಿರಿ ನೇಮಗೌಡ, ಪಿ.ವ್ಹಿ.ಜಮಾದಾರ, ಬ್ಯಾಂಕಿನ ವ್ಯವಸ್ಥಾಪಕ ಎಸ್. ಎಂ.ಗುಣದಾಳ ಇದ್ದರು. ಠಾಣಾಧಿಕಾರಿ ಪ್ರವೀಣಕುಮಾರ ಬೀಳಗಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

## ಪಲ್ಸ್ ಪೋಲಿಯೋ ಕಾರ್ಯಕ್ರಮ



**ಚಿಮ್ಮಡ** : ಚಿಮ್ಮಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ ಚಾಲನೆ ನೀಡಿದರು.

ಸಿಬ್ಬಂದಿಳಾದ ಆರ್.ಸಿ. ಸೋಲಾಪೂರ, ಬಿ.ಎಂ. ಮಾದರ, ಪಿ.ಬಿ. ಗೋಕಾವಿ, ಕವಿತಾ ಸೇರಿದಂತೆ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಕ್ಲಾಸಿಕ್ ಪವರ್ ಲಿಫ್ಟಿಂಗ್ ಸ್ಪರ್ಧೆ ಜಿಲ್ಲೆಯಿಂದ ಏಳು ಜನ ಕ್ರೀಡಾಪಟುಗಳು ಭಾಗಿ



**ಹೊಸಪೇಟೆ** : ರಾಜ್ಯದಲ್ಲಿ ಇದೇ ಮೊಟ್ಟ ಮೊದಲ ಭಾರಿಗೆ ರಾಜ್ಯ ಮಟ್ಟದ ಕ್ಲಾಸಿಕ್ ಪವರ್ ಲಿಫ್ಟಿಂಗ್ ಸ್ಪರ್ಧೆಯನ್ನು ಮಾರ್ಚ್ 15 ಮತ್ತು 16 ರಂದು ಎರೆಡು ದಿನಗಳ ಕಾಲ ಮಂಗಳೂರಿನ ಉರ್ವ ಸ್ಟೋರ್ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ.

ಈ ಸ್ಪರ್ಧೆಯಲ್ಲಿ ಹೊಸಪೇಟೆಯ ವಿಕ್ಟರಿ ಜಿಮ್ ನ ಏಳು ಜನ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಜೂನಿಯರ್ ವಿಭಾಗದಲ್ಲಿ ಗೌಸ್ ಪೀರ್,

ದೀಪಕ್ ಕೆ ಎಸ್, ಭರತ್ ಜಿ, ಅಬ್ದುಲ್ಲ ಹಾಗೂ ಸೀನಿಯರ್ ವಿಭಾಗದಲ್ಲಿ ಜೈಶರಣ, ಹುಸೇನ್ ಬಾಷಾ ಮತ್ತು ಹಸೇನ್ ಈ ಏಳು ಜನ ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿ ಅತ್ಯುತ್ತಮ ಪ್ರದರ್ಶನವನ್ನು ನೀಡಿ ಪದಕ ಗಳಿಸಿ ವಿಜಯನಗರ ಜಿಲ್ಲೆಗೆ ಕೀರ್ತಿ ತರಲಿ ಹಾಗೆ ಇದೇ ರೀತಿ ಅವರ ಸಾಧನೆ ಮುನ್ನಡೆಯಲಿ ಎಂದು ವಿಕ್ಟರಿ ಜಿಮ್ ನ ತರಬೇತುದಾರರಾದ ವಾಲಿಬಾಷಾ, ಕರ್ನಾಟಕದ ಬಲಿಷ್ಠ ಮಹಿಳೆ ವಿಜಯವಾಣಿ ಹಾಗೂ ನಗರದ ಕ್ರೀಡಾ ಕ್ರೀಡಾಭಿಮಾನಿಗಳು ಮತ್ತು ಕ್ರೀಡಾ ಪ್ರೋತ್ಸಾಹಕರು ಶುಭ ಕೋರಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಕೋಗಳಿಯಲ್ಲಿ ಸಂಭ್ರಮದ ರಥೋತ್ಸವ



**ಕೋಗಳಿ** : ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೋಗಳಿ ಗ್ರಾಮದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಸಕಲ ಮಂಗಳ ವಾದ್ಯಗಳೊಂದಿಗೆ ಚಿಮ್ಮನಹಳ್ಳಿಯ ದುರ್ಗಂಬಿಕಾ ದೇವಿಯ ತೇಜಯ ವೈಭವದ ಮೆರವಣಿಗೆ ಮೂಲಕ ಬಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿ ದೇವಸ್ಥಾನಕ್ಕೆ ತೆರಳಿತು, ನಂತರ ನಂದೀಶ್ವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆಯೊಂದಿಗೆ ಬಂದು ರಥವೇರಿತು. ಹರಿಜನ ಕೇರಿಯಿಂದ ಕಳಸದೊಂದಿಗೆ ಬಂದು ಸುಮಂಗಲಿಯರು, ಪೂಜೆ ಸಲ್ಲಿಸಿ ಆರತಿ ಬೆಳಗಿದರು, ನಂತರ ನಂದೀಶ್ವರ ಸ್ವಾಮಿಯ ಮೂರ್ತಿಯನ್ನು ರಥದಲ್ಲಿಟ್ಟು ಪಾದಗಟ್ಟೆವರೆಗೂ ರಥವು ಸಾಗಿಬಂತು, ಭಕ್ತರು ಉತ್ತತ್ತಿ, ಬಾಳೆಹಣ್ಣು ಎಸೆದು ಭಕ್ತಿ ಸಮಾರ್ಪಿಸಿದರು. ನಾಳೆ ಬೆಳಿಗ್ಗೆ ಸಾಮೂಹಿಕ ಮದುವೆಗಳು ಜರುಗುವವು ಎಂದು ನಂದೀಶ್ವರ ಸೇವಾ ಸಮಿತಿಯವರು ಹೇಳಿದರು ಮತ್ತು ಈ ಸಂದರ್ಭದಲ್ಲಿ ಊರಿನ ಮುಖಂಡರು ಸಾರ್ವಜನಿಕರು ಸೇರಿಕೊಂಡಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

# ನಗರದಲ್ಲಿ ಹೊಸ ಬಸ್‌ಗಳಿಗೆ ಶಾಸಕ ಗುಡಗುಂಟಿ ಚಾಲನೆ

**ಜಮಖಂಡಿ :** ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹೊಸ ಆರು ಬಸ್ಸುಗಳಿಗೆ ಶಾಸಕ ಜಗದೀಶ ಗುಡಗುಂಟಿ ಚಾಲನೆ ನೀಡುವ ಮೂಲಕ ಬಸ್ ಚಲಾಯಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರು ಬಸ್‌ಗಳಲ್ಲಿ ಬಾಗಲಕೋಟೆಯಿಂದ ಮಿರಜ್ ಮತ್ತು ತೇರದಾಳದಿಂದ ಬೆಂಗಳೂರು ಸಹಿತ ದೂರದ ಹೊಸ ಮಾರ್ಗಗಳಿಗೆ ಸಂಚ–ರಿಸಲಿವೆ. ಶಕ್ತಿ ಯೋಜನೆಯಿಂದ ಶೇ. 80 ರಷ್ಟು ಮಹಿಳೆಯರು ಪ್ರಯಾಣ ಮಾಡುತ್ತಿರುವ ಹಿನ್ನಲೆಯಲ್ಲಿ ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ಬಾಗಿಲವರೆಗೆ ಜೋತು ಬಿದ್ದು ಹೋಗುವ ಪರಿಸ್ಥಿತಿ ಎದುರಾಗಿದೆ ಎಂದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕೂಡಲೆ ಗಮನಹರಿಸಿ ವಿದ್ಯಾರ್ಥಿಗಳಿಗೆ ಅನೂಕೂಲವಾಗುವಂತೆ ಸಂಚಾರ ಕಲ್ಪಿಸಬೇಕು. ತಾಲೂಕಿನ ಹಲವು ಪ್ರದೇಶದಗಳಲ್ಲಿ ಸರಿಯಾಗಿ ಬಸ್ ಸಂಚಾರವಿಲ್ಲ. ಉತ್ತಮ ಸಾರಿಗೆ ವ್ಯವಸ್ಥೆ ಕ್ಲಿಸುವ ಮೂಲಕ ಬಸ್ ನಿಲ್ದಾಣದಲ್ಲಿ ಸ್ವಚ್ಚತೆ ಕಾಪಾಡಬೇಕು. ಜಮಖಂಡಿ ಸಾರಿಗೆ ಘಟಕಕ್ಕೆ ಇನ್ನೂ 30 ಹೊಸ ಬಸ್‌ಗಳ ಅವಶ್ಯಕವಿದ್ದು ಸರಕಾರದ ಗಮನ ಸೆಳೆಯುವುದಾಗಿ ಹೇಳಿದರು.




ಇದೇ ಸಂದರ್ಭದಲ್ಲಿ ಘಟಕ ವ್ಯವಸ್ಥಾಪಕ ಎಸ್.ಎಸ್.ಗಸ್ತಿ, ಸಾರಿಗೆ ನಿಯಂತ್ರಕ ಪಾಯಗೊಂಡ, ಡಾ.ಕೃಷ್ಣಾ ಬಣ್ಣದ, ಬಿಜೆಪಿ ನಗರಮಂಡಲ ಅಧ್ಯಕ್ಷ ಅಜೇಯ ಕಡಪಟ್ಟಿ, ವಿಜಯಲಕ್ಷಿ ಉಕಮನ್ನಾಳ, ರಾಜೆಸಾಬ ಕಡಕೋಳ, ಕುಷಾಲ ವಾಗ್ಮೋರೆ, ಗಣೇಶ ಸಿರಿಗೆನ್ನವರ, ಸಂತೋಷ ಮಾನೆ ಹಲವರು ಇದ್ದರು.

# ನಗರದಲ್ಲಿ ನೀರಿನ ಕೊರತೆ: ಶಾಸಕರ ಮನೆ ಮುಂದೆ ಪ್ರತಿಭಟನೆ

**ಜಮಖಂಡಿ :** ಭೀಕರ ಬರಗಾಲ ಘೋಷಣೆಗೊಂಡಿದ್ದು, ಕಡುಬೇಸಿಗೆ ಆರಂಭಗೊಳ್ಳುತ್ತಿರುವ ಹಿನ್ನಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಖಾಲಿ ಕೊಡಗಳು ಹೊರಬರಲು ಶುರುಮಾಡಿವೆ.

ನಗರದ ವಾರ್ಡ್ 31ರ ವ್ಯಾಪ್ತಿಯ ಗಾಂಧಿ ನಗರದಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಮಾಡುತ್ತಿಲ್ಲ ಎಂದು ಆಕ್ರೋಶಗೊಂಡ ಮಹಿಳೆಯರು ಶಾಸಕರ ಗೃಹ ಕಛೇರಿ ಎದುರಿಗೆ ಖಾಲಿ ಕೊಡಗಳೊಂದಿಗೆ ಧರಣಿ ಪ್ರತಿಭಟನೆ ನಡೆಸಿದರು.

ಬೇಸಿಗೆ ನಿಮಿತ್ತ ನಗರದಲ್ಲಿ ನೀರಿನ ಅಭಾವ ಪ್ರಾರಂಭವಾಗಿದೆ. ಕೆಲವೊಂದು ಕೊಳವೆ ಬಾವಿ ಜಲಮೂಲಗಳು ಬತ್ತಿ ಹೋಗುತ್ತಿವೆ. ಗಾಂಧಿ ನಗರದಲ್ಲಿ ಹೆಚ್ಚಾಗಿ ಬಡಜನತೆ ವಾಸಿಸುತ್ತಿದ್ದು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಕಳೆದ ಒಂದು ತಿಂಗಳಿಂದ ನಗರಸಭೆಯವರು ನೀರು ಪೂರೈಕೆ ಮಾಡುತ್ತಿಲ್ಲ ಅಧಿಕಾರಿಗಳ ನಿರ್ಲಕ್ಷದಿಂದ ನೀರಿನ ತೊಂದರೆ ಎದುರಾಗುತ್ತಿದೆ ಎಂದು ನಗರಸಭೆ ಪೌರಾಯುಕ್ತೆ ಲಕ್ಷ್ಮೀ ಅಷ್ಟಗಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭಟನಾ ಸ್ಥಳಕ್ಕೆ ಶಾಸಕ ಜಗದೀಶ ಗುಡಗುಂಟಿ ಮತ್ತು ಪೌರಾಯುಕ್ತೆ ಲಕ್ಷ್ಮೀ ಅಷ್ಟಗಿ ಆಗಮಿಸಿ ಸಮಸ್ಯೆಗಳನ್ನು ಆಲಿಸಿ ನೀರು ಬಿಡುವದಾಗಿ ಭರವಸೆ ನೀಡಿದ ನಂತರ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು. ಇದೇ ಸಂಧರ್ಭದಲ್ಲಿ ಗಾಂಧಿನಗರದ ಮಹಿಳೆಯರು ಹಾಗೂ ಸಾರ್ವಜನಿಕರು ಇದ್ದರು.

# ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ

**ಜಮಖಂಡಿ :** ನಗರದ ಬಸವೇಶ್ವರ ಶಿಕ್ಷಣಸಂಸ್ಥೆ ಆವರಣದಲ್ಲಿ ಮಾರ್ಚ 5 ಮತ್ತು 6 ರಂದು ಬೆಳಿಗ್ಗೆ 11 ಗಂಟೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಮತ್ತು ಸಮೂಹ ಸಂಪನ್ಮೂಲ ಕಾರ್ಯಾಲಯ ಜಮಖಂಡಿ ಮತ್ತು ಬಸವೇಶ್ವರ ಶಿಕ್ಷಣ ಸಂಸ್ಥೆಯ ಕಡಪಟ್ಟಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ಸಹಯೋಗದಲ್ಲಿ ಎರಡು ವಿಜ್ಞಾನ ವಸ್ತು ಮತ್ತು ರಂಗೋಲಿಯಲ್ಲಿ ವಿಜ್ಞಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ರವೀಂದ್ರ ತೆಗ್ಗಿ ಹೇಳಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸನ್ 2023–24 ನೇ ಸಾಲಿನ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಂದ ವಯಕ್ತಿಕ ಮತ್ತು ಸಮೂಹ ರೀತಿಯಲ್ಲಿ 70 ತರಹದ ವಿಜ್ಞಾನ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು ತಲಾ ತರಗತಿಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳ ಆಯ್ಕೆ ನಡೆಯಲಿಎ. ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಲಾಗುವದು. ರಾಷ್ಟ್ರ ಮಟ್ಟದಲ್ಲಿ ಪ್ರದರ್ಶನಗೊಂಡ ವಿಜ್ಞಾನ ಮಾದರಿ ವಸ್ತು ಪ್ರದರ್ಶನ ನಡೆಯಲಿದೆ ಎಂದರು.

ಮಾರ್ಚ 5ರಂದು ಬೆಳಿಗ್ಗೆ 11 ಗಂಟೆಗೆ ವಿಜ್ಞಾನ ವಸ್ತು ಮತ್ತು ರಂಗೋಲಿಯಲ್ಲಿ ವಿಜ್ಞಾನ ಪ್ರದರ್ಶನವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಜಿ.ಕೆ.ಮಠದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಚಾರ್ಯ ಎಸ್.ಬಿ.ಹೆಬ್ಲಿ, ಹಿರಿಯ ಉಪನ್ಯಾಸಕ ಸಿ.ಎಂ.ನ್ಯಾಮಗೌಡ, ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಎಚ್.ಬಿ.ಹುದ್ದಾರ ಆಗಮಿಸಲಿದ್ದಾರೆ.

ಮಾರ್ಚ 6ರಂದು ಸಾಯಂಕಾಲ 4 ಗಂಟೆಗೆ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಜಿ.ಕೆ. ಮಠದ ವಹಿಸುವರು. ಮುಖ್ಯ ಅತಿಥಿಗಳಾಗಿ ಡಿ.ವೈ. ಎಸ್.ಪಿ. ಈ ಶಾಂತವೀರ, ಕ್ಷೇತ್ರ ಸಮನ್ವಯಾಧಿಕಾರಿ ರಮೇಶ ಅವಟಿ, ಉಪನ್ಯಾಸಕ ಡಾ.ಲಿಂಗಾನಂದ ಗವಿಮಠ, ವಿಜ್ಞಾನ ವಸ್ತು ಪ್ರದರ್ಶನ ಸಂಂ–ಯೋಜಕ ಎಂ.ಬಿ.ಹೆಬ್ಲಿ ಸಹಿತ ಹಲವರು ಆಗಮಿಸಲಿದ್ದಾರೆ ಎಂದರು.

# ಅನ್ಯಭಾಷೆ ರಾರಾಜಿಸುವ ನಾಮಫಲಕಗಳ ತೆರವಿಗೆ ಕರವೇ ಆಗ್ರಹ



**ಜಮಖಂಡಿ :** ರಾಜ್ಯ ಸರ್ಕಾರದ ಆದೇಶದಂತೆ ಶೇ.60ರಷ್ಟು ಕನ್ನಡ ಬಳಸದ ಅನ್ಯಭಾಷೆಗಳು ರಾರಾಜಿಸುವ ನಾಮಫಲಕಗಳನ್ನು ತೆರವುಗೊಳಿಸಬೇಕೆಂದು ನಗರಸಭೆ ಪರಿಸರ ಅಭಿಯಂತರ ಕುಸುಮಾ ಅವರಿಗೆ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ತಾಲೂಕ ಉಪಾಧ್ಯಕ್ಷ ಆನಂದ ಕಾಂಬಳೆ, ಸುಂದರ ಮೀಶಿ, ಲಿಂಗರಾಜ ಬೆಳ್ಳೆನ್ನವರ, ಪರಸು ಭಜಂತ್ರಿ, ಶ್ರೀಧರ ಪೊತ್ಯಾಗೋಳ, ಮುತ್ತು ಕಾಂಬಳೆ ಸಹಿತ ವಿವಿಧ ಕನ್ನಡಪರ ಅಭಿಮಾನಿಗಳು ಇದ್ದರು.

# ರಬಕವಿ : ಹರಿ ಕೋಪರ್ಡೆ ನಿಧನ



**ರಬಕವಿ :** ಇಲ್ಲಿಯ ನಾಮದೇವ ಶಿಂಪಿ ಸಮಾಜದ ಹರಿ ಮೋಹನ ಕೋಪರ್ಡೆ ತಮ್ಮ 53 ನೆಯ ವಯಸ್ಸಿನಲ್ಲಿ ಮಾರ್ಚ 3 ರಂದು ಅಲ್ಪ ಕಾಲದ ಅಸ್ವಸ್ಥತೆಯಿಂದ ನಿಧನರಾದರು. ಇವರು ತಮ್ಮ ಹಿಂದೆ ವೃದ್ಧ ತಂದೆ ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ನಮ್ಮ ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

## ಲೋಕಾಯುಕ್ತ: 13 ರಂದು ಜನಸಂಪರ್ಕ ಸಭೆ


**ಬಾಗಲಕೋಟೆ :** ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮಾರ್ಚ 13 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ವರೆಗೆ ಬಾದಾಮಿ ತಾಲೂಕ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ.

ಸಾರ್ವಜನಿಕರಿಗೆ ಸರಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ಇನ್ನಿತರ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ಧ ಸದರಿ ಸಭೆಗೆ ಹಾಜರಾಗಿ ಲಿಖಿತ ರೂಪದಲ್ಲಿ ದೂರು ಸಲ್ಲಿಸಬಹುದಾಗಿದೆ. ಅಲ್ಲದೇ ಸಮಸ್ಯೆಗೆ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಜನಸಂಪರ್ಕ ಸಭೆಯಲ್ಲಿ ಲೋಕಾಯಕ್ತ ಇಲಾಖೆಯ ಪೊಲೀಸ್ ಅಧೀಕ್ಷಕ ಸತೀಶ ಚಿಟಿಗುಬ್ಬಿ, ಉಪಾಧೀಕ್ಷಕ ಸಿದ್ದೇಶ್ವರ, ಪಿಐ–1 ಎಂ.ಎಚ್.ಬಿದರಿ, ಪಿಐ–3 ಬಸವರಾಜ ಮುಕರ್ತಿಹಾಳ ಸೇರಿದಂತೆ ಬಾದಾಮಿ ತಾಲೂಕಿನ ಎಲ್ಲ ಇಲಾಖೆಯ ತಾಲೂಕ ಮಟ್ಟದ ಅಧಿಕಾ–ರಿಗಳು ಹಾಜರಿರುತ್ತಾರೆಂದು ಲೋಕಾಯುಕ್ತ ಇಲಾಖೆಯ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾಸ್ಯದ ಹೊನಲು ಹರಿಸಿದ 'ತಾಳಿಯ ತಕರಾರು'

**ರಾಯಬಾಗ :** ತಾಲ್ಲೂಕಿನ ಹಾರೂಗೇರಿ ಪಟ್ಟಣದ ಬಿ. ಆರ್. ದರೂರ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಶಿವಸಂಚಾರ ನಾಟಕೋತ್ಸವದ ಎರಡನೆಯ ದಿನ "ತಾಳಿಯ ತಕರಾರು" ನಾಟಕ ಪ್ರದರ್ಶನಗೊಂಡಿತು. ಜೀವನ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದ್ದ ನಾಟಕ ಹಾಸ್ಯದ ಹೊನಲು ಹರಿಸಿ ಪ್ರೇಕ್ಷಕರನ್ನು ರಂಜಿಸಿತು. ಜೀವನ ಪಾಠಗಳನ್ನು ಹೇಳಿದ ನಾಟಕದ ಪಾತ್ರಧಾರಿಗಳು ಮನೋಜ್ಞ ಅಭಿನಯ ಮಾಡಿ ಎಲ್ಲರೂ ಸೈ ಎನ್ನುವಂತೆ ಅಭಿನಯಿಸಿದರು. ಡಾ. ವಿ. ಎಸ್. ಮಾಳಿ, ಡಾ. ಎಚ್. ಎಸ್. ಬಿಸ್ವಾಗರ, ಡಾ. ಎ. ಡಿ. ಟೋಣಗೆ, ಬಿ. ಎ. ಜಂಬಗಿ, ಎಸ್. ಎ. ದಟವಾಡ, ಡಾ. ರತ್ನಾ ಬಾಳಪ್ಪನವರ, ಸಿದ್ಧಲಿಂಗ ನರಗಟ್ಟಿ, ಭರಮು ನಾಗನೂರ, ರವೀಂದ್ರ ಪಾಟೀಲ, ರವೀಂದ್ರ ಭಾವಿ, ತ್ರಿಶಲಾ ನಾಗನೂರ, ವಿಠ್ಠಲ ತೇರದಾಳೆ, ಪಿ. ಬಿ. ಕಲ್ಜಿಮಡ, ಮಹೇಶ ಐಹೊಳೆ, ಸಂತೋಷ ತಮದಡ್ಡಿ , ಸುವರ್ಣಾ ಬಡಿಗೇರ ಉಪಸ್ಥಿತ–ರಿದ್ದರು. ಶ್ರೀಧರ ಹೋಳ್ಕರ, ಎಮ್. ಎಸ್. ಬಳವಾಡ ಸೊಗಸಾಗಿ ನಿರೂಪಿಸಿದರು. ಡಾ. ರಮೇಶ ಕಮತಗಿ ಸ್ವಾಗತಿಸಿದರು. ಅಮೃತಾ ಒಂಟೆ ಪ್ರಾರ್ಥಿಸಿ ವಂದಿಸಿದರು. ಕಲಾಕಾರರನ್ನು ಸನ್ಮಾನಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಮಹಿಳೆಯರು ತಾವು ಧಾರಾವಾಹಿಗಳ ದಾಸರಲ್ಲ ಎಂಬುದನ್ನು ರುಜುವಾತು ಪಡಿಸಿದರು.



**ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಬಾಗಲಕೋಟ ಜಿಲ್ಲೆಯ ಇಳಕಲ್ ತಾಲೂಕಿನ ಚಟ್ನಿಹಾಳ ಗ್ರಾಮದಲ್ಲಿ ಸಮುದಾಯ ಭವನ ಮತ್ತು ಅಗಸಿ ನಿರ್ಮಾಣದ ಕಾಮಗಾರಿ ಅಂದಾಜು ಮೊತ್ತ 33.50ಲಕ್ಷಗಳು ಭೂಮಿ ಪೂಜೆಯನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಹುನಗುಂದ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ವಿಜಯಾನಂದ ಎಸ್ ಕಾಶಪ್ಪನವರ ಅವರು ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಯುವಕರು ಉಪಸ್ಥಿತರಿದ್ದರು.**

# ಕಠಿಣ ಪರೀಶ್ರಮವೇ ಸಾಧನೆಯ ಮಂತ್ರ: ಸಿದ್ದು ಸವದಿ

**ಚಿಮ್ಮಡ :** ಪ್ರಪಂಚದಲ್ಲಿ ವಿದ್ಯೆ, ಸಾಧನೆ ಲಾಟ–ರಿಯಿಂದ ಪಡೆಯಲಾಗುವುದಿಲ್ಲ, ಯಾವೂದೇ ಸಾಧನೆಗೆ ಕಠಿಣ ಪರೀಶ್ರಮವೇ ಮೂಲಮಂತ್ರವೆಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು, ಯಾವುದೇ ಕಲಿಕೆಯ ಹಿಂದೆ ತಂದೆ–ತಾಯಿ, ಶಿಕ್ಷಕರು, ಶಾಲಾ ಸಮೀತಿ ಸೇರಿದಂತೆ ಹಲವಾರು ಜನರ ಪರೀಶ್ರಮ ಇರುತ್ತದೆ, ನಾವು ಉತ್ತಮ ಸಾಧನೆ ಮಾಡುವ ಮೂಲಕ ಅವರಿಗೆ ಗೌರವ ಕೊಡಬೇಕು, ಉತ್ತಮ ಪ್ರಜೆಯಾಗುವ ಮೂಲಕ ದೇಶದ ಋಣವನ್ನು ತೀರಿಸಬೇಕೆಂದರು.




ಸಾನಿಧ್ಯವಹಿಸಿದ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಕಲಿಕೆಗೆ ಪರೀಶ್ರಮದೊಂದಿಗೆ ಉತ್ತಮ ವಾತಾವರಣವೂ ಅಷ್ಟೇ ಮಹತ್ವದ್ದಾಗಿದೆ, ಅಯೋಗ್ಯರ ಸಂಗ ಮಾಡದೇ, ತಂದೆ, ತಾಯಿ, ಗುರುಗಳ ಮಾರ್ಗದರ್ಶನದಲ್ಲಿ ನಮ್ಮ ಕಲಿಕೆ ಮುಂದುವರೆದಲ್ಲಿ ಸಾಧನೆ ಕಟ್ಟಿಟ್ಟಬುತ್ತಿ ಎಂದರು.

ಸಿಆರ್‌ಪಿ ಸಮನ್ವಯ ಅಧಿಕಾರಿ ದ್ರಾಕ್ಷಾಯಿಣಿ ಮಂಡಿ, ಮುಖ್ಯ ಗುರುಮಾತೆ ಎಂ.ಎಸ್. ಜಿಟ್ಟಿ ಮಾತನಾಡಿದರು.

ಸಮಾರಂಭದ ಸಾನಿಧ್ಯವನ್ನು ಓಂಕಾರ ಯರಗಟ್ಟಿಕರ ವಹಿಸಿದ್ದರು ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಗ್ರಾ.ಪಂ ಮಾಜಿ ಅಧ್ಯಕ್ಷ ಆನಂದ ಕವಟಿ, ಪ್ರಕಾಶ ಪಾಟೀಲ, ಎಪಿಎಂಸಿ ನಿರ್ದೇಶಕ ಪ್ರಭು ಮುಧೋಳ, ಮನೋಜ ಹಟ್ಟಿ, ಬಾಳಪ್ಪ ಗಡೆಪ್ಪನವರ, ನಾಗಪ್ಪ ಆಲಕನೂರ, ಬಾಳೇಶ ಬ್ಯಾಕೋಡ, ಪ್ರಾಧ್ಯಾಪಕ ಡಾ;– ಎಚ್.ಎಂ. ಕುಂಬಾರ ಇಲಾಹಿ ಜಮಖಂಡಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿದ್ದರು.

ಇದೇ ಸಂಧರ್ಬದಲ್ಲಿ ಕ್ರೀಡಾಕೂಟಗಳಲ್ಲಿ ವಿಜೇತರಾದ ಹಾಗೂ ಹಲವು ಸಾಧಕ ವಿದ್ಯಾರ್ಥಿಗಳನ್ನು ಸತ್ಕರಿಸಿ ಗೌರವಿಸಲಾಯಿತು.

# ಶಂಭು ಬಳಿಗಾರಗೆ ರಾಜ್ಯ ಮಟ್ಟದ ಭಾವೈಕ್ಯತಾ ಪ್ರಶಸ್ತಿ

**ವರದಿ: ಲಾಲಸಾಬ ಸವಾರಗೋಳ.**

**ವಿಜಯಪುರ :** ಜಿಲ್ಲೆಯ ಕೊಲ್ಹಾರ ಪಟ್ಟಣದ ಇಪ್ಪತ್ತನೇ ಶತಮಾನದ ಸೂಫಿ ಸಂತ ಅಲ್ ಹಾಜ್ ಶಾಹ ಮಹಮ್ಮದ್ ಅಬ್ದುಲ್ ಗಫಾರ ಖಾದ್ರಿ (ಅಲಾಹಬಾದ ಮೌಲಾನಾ) ಅವರ ಉರುಸಿನ ನಿಮಿತ್ಯ ಕೊಡಮಾಡುವ ಪ್ರತಿಷ್ಠಿತ ರಾಜ್ಯಮಟ್ಟದ ಅಲಾಹಬಾದ ಮೌಲಾನಾ ಭಾವೈಕ್ಯತಾ ಪ್ರಶಸ್ತಿಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಜಾನಪದ ವಿದ್ವಾಂಸರಾದ ಶಂಭು ಬಳಿಗಾರ ಆಯ್ಕೆಯಾಗಿದ್ದಾರೆ ಎಂದು ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷರಾದ ಹಿರಿಯ ಸಂಶೋಧಕ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ತಿಳಿಸಿದ್ದಾರೆ.



ಜಾನಪದ ಸಾಹಿತ್ಯದ ಮೂಲಕ ಮಾನವೀಯ ಮೌಲ್ಯಗಳನ್ನು ಜನಮಾನಸದಲ್ಲಿ ಬಿತ್ತುತ್ತಾ ಸಮಾಜಕ್ಕೆ ಅಪಾರ ಕೊಡುಗೆ ನೀಡಿರುವ ಶಂಭು ಬಳಿಗಾರ ಅವರಿಗೆ ಮಾರ್ಚ್ ಏಳರಂದು ಕೊಲ್ಹಾರ ಪಟ್ಟಣದ ಖಾನಕಾಯೆ ಗಫಾರೀಯಾ ಆವರಣದಲ್ಲಿ ಜರುಗುವ ಭವ್ಯ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಅಲಹಾಬಾದ್ ಮೌಲಾನಾ ಭಾವೈಕ್ಯತಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದ್ದಾರೆ.

## ಗುರುವಂದನೆ ಹಾಗೂ ಸ್ನೇಹ ಸಮ್ಮೀಲನ

# ಜಗತ್ತಿಗೆ ಜ್ಞಾನ ಮತ್ತು ಸಂಸ್ಕಾರ ನೀಡುವದು ಅವಶ್ಯಕ: ಬಿ.ಜಿ. ಕೆರಕಲಮಟ್ಟಿ

**ಮಹಾಲಿಂಗಪುರ :** ಅಕ್ಷರ ಜ್ಞಾನವನ್ನು ನೀಡಿದ ಗುರುಗಳನ್ನು ಹಾಗೂ ಕೂಡಿಕಲಿತ ಸಹಪಾಠಿಗಳನ್ನು 25 ವರ್ಷಗಳ ನಂತರ ಒಗ್ಗೂಡಿಸಿರುವ ಗುರುವಂದನೆ ಮತ್ತು ಸ್ನೇಹ ಸಮ್ಮೀಲನ ಕಾರ್ಯಕ್ರಮವು ಗುರುಶಿಷ್ಯ ಪರಂಪರೆಗೆ ಸಾಕ್ಷಿಯಾಗಿದೆ. ಗುರುಶಿಷ್ಯ ಸಂಬಂಧವು ಶಾಶ್ವತ ಮತ್ತು ಪವಿತ್ರವಾದ ಸಂಬಂಧವಾಗಿದೆ ಎಂದು ನಿವೃತ್ತ ಶಿಕ್ಷಕ ಜಿ.ಜಿ.ಕೆರಕಲಮಟ್ಟಿ ಹೇಳಿದರು.

ಪಟ್ಟಣದ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಜರುಗಿದ ಸ್ಥಳೀಯ ಚನ್ನಗೀರೇಶ್ವರ ಪ್ರಾಸಾದಿಕ ಶಾಲೆಯ 1 ರಿಂದ 7ನೇ ತರಗತಿಯ 1992–1998ನೇ ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಶಿಷ್ಯ ಬಳಗದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಅಂದು ನಮ್ಮ ಕೈಯಲ್ಲಿ ಕಲಿತ ವಿದ್ಯಾರ್ಥಿಗಳಾದ ನೀವು ಇಂದು ಸಮಾಜದಲ್ಲಿ ನಮಗಿಂತ ಉನ್ನತ ಹುದ್ದೆಗಳಲ್ಲಿರುವದು ಹೆಮ್ಮೆಯ ಸಂಗತಿಯಾಗಿದೆ.



ಇಂದು ಸಮಾಜದ ಜವಾಬ್ದಾರಿ ಸ್ಥಾನದಲ್ಲಿರುವ ವಿದ್ಯಾರ್ಥಿಗಳು ತಮ್ಮ ತಮ್ಮ ವೃತ್ತಿ, ಕಾಯಕದ ಜೊತೆಗೆ ನಮ್ಮ ಸನಾತನ ಧರ್ಮ, ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಂಡು, ನಿಮ್ಮ ಮಕ್ಕಳಿಗೆ ಉತ್ತಮವಾದ ಸಂಸ್ಕಾರ ಮತ್ತು ಜ್ಞಾನವನ್ನು ನೀಡುವ ಕೆಲಸ ಮಾಡಿರಿ. ಇಂದು ಜಗತ್ತಿಗೆ ಜ್ಞಾನ ಮತ್ತು ಸಂಸ್ಕಾರವನ್ನು ಕೊಡುವದು ಬಹಳ ಮುಖ್ಯವಾಗಿದೆ ಎಂದರು.

ಶಿಕ್ಷಕ ಎಂ.ಆರ್.ಒಂಟಗೋಡಿ ಮಾತನಾಡಿ ಅಂದು ನಾವು ನಿಮಗೆ ಬಡಿದು ಬುದ್ದಿ ಹೇಳಿದ್ದು ನಿಮ್ಮ ಜ್ಞಾನ ವಿಕಾಸಕ್ಕಾಗಿ ಮಾತ್ರ. ಸುಮಾರು 25 ವರ್ಷಗಳ ನಂತರ ಕಲಿಸಿದ ಎಲ್ಲಾ ಗುರುಗಳನ್ನು ಕರೆದು ಸನ್ಮಾನಿಸಿ–ಗೌರವಿಸಿದ ಎಲ್ಲಾ ಶಿಷ್ಯಬಳಗದ ಪ್ರೀತಿ, ಅಭಿಮಾನವನ್ನು ಕಂಡು ಬಹಳ ಹೆಮ್ಮೆ ಎನಿಸುತ್ತಿದೆ ಎಂದರು.

ನಿವೃತ್ತ ಶಿಕ್ಷಕರಾದ ಎಸ್.ಎಂ.ಅಣ್ಣಿಗೇರಿ, ಪಿ.ಎಸ್.ಸೋರಗಾಂವಿ ಮಾತನಾಡಿ 25 ವರ್ಷಗಳ ಹಿಂದಿನ ವಿದ್ಯಾರ್ಥಿಗಳ ತುಂಟಾಟ, ತರ್ಲೆಗಳು, ಬೋಧನಾ ವಿಷಯಗಳ ಹಳೆಯ ನೆನಪುಗಳನ್ನು ಸ್ಮರಿಸಿ, ವಿದ್ಯಾರ್ಥಿಗಳು ಗುರುವಂದನೆ ಹಾಗೂ ಸ್ನೇಹ ಸಮ್ಮೀಲನ ಕಾರ್ಯಕ್ರಮದ ಮೂಲಕ ಗುರುಶಿಷ್ಯ ಪರಂಪರೆಯು ಶಾಸ್ವತವಾಗಿ ಮುಂದುವರೆಯಲಿ ಎಲ್ಲ ಶಿಷ್ಯರಿಗೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.

**ಗುರುವಂದನೆ :** 1992 ರಿಂದ 1998ರ ಅವಧಿಯಲ್ಲಿ 1 ರಿಂದ 7ನೇ ತರಗತಿವರೆಗೆ ಕೂಡಿ ಕಲಿತ ವಿದ್ಯಾರ್ಥಿಗಳು ತಮಗೆ ಕಲಿಸಿದ ಎಲ್ಲಾ ಗುರುಗಳನ್ನು ತೆರೆದ ವಾಹನದಲ್ಲಿ ಹೆಸ್ಕಾಂ ಗಣಪತಿ ದೇವಸ್ಥಾನದಿಂದ ಸಿದ್ದಾರೂಢ ಆಶ್ರಮದವರೆಗೆ ಮೆರವಣಿಗೆಯ ಮೂಲಕ ವೇದಿಕೆಗೆ ಕರೆತಂದು, ಅವರನ್ನು ಸನ್ಮಾನಿಸಿ ಆಶೀರ್ವಾದ ಪಡೆದುಕೊಂಡರು.

**ಸ್ನೇಹಿತರ ಸಮ್ಮೀಲನ :** 25 ವರ್ಷಗಳ ನಂತರ ಪರಸ್ಪರ ಭೇಟಿಯಾದ ಎಲ್ಲಾ ಸಹಪಾಠಿಗಳು ಪರಸ್ಪರ ಉಭಯ ಕುಶಲೋಪರಿ ನಡೆಸಿ, ಗುರುಗಳೊಂದಿಗೆ ಸಹಭೋಜನ, ಭಾವಚಿತ್ರಗಳನ್ನು ತೆಗೆಸಿಕೊಂಡು ಶಾಲಾ ದಿನಗಳನ್ನು ಮೆಲಕು ಹಾಕಿ ಸಂಭ್ರಮಿಸಿದರು.

ನಿವೃತ್ತ ಶಿಕ್ಷಕ, ಶಿಕ್ಷಕಿಯರಾದ ವಿ.ಸಿ.ಹೊಸಮಠ, ಹೊಸಮನಿ, ಮೇಲಿನಮನಿ, ಭೂಳೆಗಾರ, ಕೋರಿಶೆಟ್ಟಿ, ದಲಾಲ, ಬ್ಯಾಲ್ಯಾಳ, ಮುಂಡಗನೂರ, ತಳವಾರ, ಹರಕಂಗಿ, ಕುಜನೂರ, ಕಟಾರೆ, ಹುದ್ದಾರ ಅವರನ್ನು ಹಾಗೂ ರಬಕವಿ–ಬನಹಟ್ಟಿ ಕಸಾಪ ತಾಲೂಕಾ ಅಧ್ಯಕ್ಷ ಮ.ಕೃ.ಮೇಗಾಡಿ ಅವರನ್ನು ಸನ್ಮಾನಿಸಲಾಯಿತು.

ಮಹಾಲಿಂಗ ಮಾಳಿ, ಹಣಮಂತ ಯರಗಟ್ಟಿ, ವಿರೇಶ ಜಿಗೇರಿ, ಸುರೇಶ ಮಡಿವಾಳ, ಸವಿತಾ ಹೂಗಾರ, ಪ್ರೀತಿ ಕಲ್ಯಾಣಿ, ಅನಿತಾ ಬಂಡಿಗಣಿ, ದಾನಮ್ಮ ಮಳಲಿ, ರಮೇಶ ಹಿಡಕಲ್, ಮಹಾಂತೇಶ ನಾಗರಾಳ, ವಿಜಯ ಶಿರೋಳ, ರಮೇಶ ಜಳಕಿ, ಬಾಬು ಅತ್ತಾರ, ಶಿವಾನಂದ ಬಿ।ಪಾಟೀಲ, ಪ್ರೀತಿ ಅಂಬಿ, ಗೀತಾ ಮೂಗಳಖೋಡ, ಲಕ್ಷ್ಮೀ ಅನಂತಪೂರ, ಬಸವರಾಜ ಕವಟಗೊಪ್ಪ, ನಿಂಗನಗೌಡ ಪಾಟೀಲ, ಸೋಮು ಬಡಿಗೇರ, ಮಹಾಲಿಂಗ ಕಬ್ಬೂರ, ಸಂಗಮೇಶ ಉಪ್ಪಲದಿನ್ನಿ, ಲಕ್ಷ್ಮಣ ಇಟ್ನಾಳ, ಮಹೇಶ ಮ್ಯಾಗಾಡಿ, ಸುರೇಶ ರಬಕವಿ, ಸದಾಶಿವ ಹಣಗಂಡಿ, ಲಕ್ಷ್ಮಣ ಬೋಕಿ, ವಿಠ್ಠಲ ಕುಲಕರ್ಣಿ, ವೀರಭದ್ರಯ್ಯಾ ಮಠಪತಿ, ಶಿವಯ್ಯ ಮಠಪತಿ, ಮಹಾಲಿಂಗ ಮಾಲಾಪೂರ, ಶಾನೂರ ತೇರದಾಳ, ಪ್ರದೀಪ ಯಾದವಾಡ, ಶ್ರೀಶೈಲ ತಡಸಲ, ಸಿದ್ರಾಮ ಖೋತ, ಮಂಜುನಾಥ ಆಡಿನ ಸೇರಿದಂತೆ ಹಲವರು ಇದ್ದರು.

# ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ: ಸಚಿವ ಡಾ.ಎಂ.ಬಿ.ಪಾಟೀಲ




**ವಿಜಯಪುರ :** ಜಿಲ್ಲೆಯಲ್ಲಿ ವಿವಿಧ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ ವಹಿಸಲಾಗುತ್ತಿದೆ. ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆಯಿಂದ ಜಿಲ್ಲೆಯಲ್ಲಿ ಬೆಳೆಯಲಾದ ದ್ರಾಕ್ಷಿ ಸೇರಿದಂತೆ ವಿವಿಧ ಬೆಳೆಗಳಿಗೆ ಉತ್ತಮ ಬೆಲೆ ದೊರಕಿ ಆರ್ಥಿಕತೆ ವೃದ್ಧಿಯಾಗಿ, ಸ್ಥಳೀಯವಾಗಿಯೇ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದ್ದು, ಜಿಲ್ಲೆಯ ಸರ್ವಾಂಗೀರ್ಣ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರು ಹೇಳಿದರು.

ಶನಿವಾರ ತಿಕೋಟಾದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಮಿನಿ ವಿಧಾನಸೌಧ ಉದ್ಘಾಟನೆ ಹಾಗೂ ತಾಲೂಕಾ ಪಂಚಾಯತಿ ಮತ್ತು ಪಟ್ಟಣ ಪಂಚಾಯತಿಯ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕೇವಲ ನೀರಾವರಿ ಯೋಜನೆಗಳಷ್ಟೇ ಅಲ್ಲದೇ ಕೆರೆಗಳಿಗೆ ನೀರು ತುಂಬಿಸುವುದು, ಶಿಕ್ಷಣ ಗುಣಮಟ್ಟ ಸುಧಾರಣೆ, ಶಾಲಾ ಕಟ್ಟಡಗಳ ಸುಧಾರಣೆ, ಸುಸಜ್ಜಿತ ಗ್ರಂಥಾಲಯಗಳ ನಿರ್ಮಾಣ, ಸ್ಮಾರ್ಟ್ ಕ್ಲಾಸ್‌ಗಳ ಆರಂಭ, ಅರಣ್ಯ ಪ್ರದೇಶಾಭಿವೃದ್ಧಿ, ಜಿಲ್ಲೆಯ ಮಮದಾಪುರದಲ್ಲಿ 1400 ಎಕರೆ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ, ಗ್ರಾಮೀಣ ರಸ್ತೆ ಅಭಿವೃದ್ಧಿಗೂ ಒತ್ತು ನೀಡುವ ಮೂಲಕ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದ ನಮ್ಮ ಸರ್ಕಾರ ಚುನಾವಣೆಗೆ ಪೂರ್ವ ಘೋಷಿಸಿದಂತೆ ಎಲ್ಲ ಗ್ಯಾರಂಟಿಗಳನ್ನು ನೀಡುವ ಮೂಲಕ ನುಡಿ–ದಂತೆ ನಡೆಯುತ್ತಿದ್ದೇವೆ. ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಒತ್ತು ನೀಡಿದೆ. ಆರ್ಥಿಕವಾಗಿ ಸಬಲರಾಗಲು ಈ ಯೋಜನೆ ಸಹಕಾರಿಯಾಗಿವೆ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮಿ ಅನ್ನಭಾಗ್ಯ ಹಾಗೂ ಯುವ ನಿಧಿ ಯೋಜನೆ ಎಲ್ಲ ವರ್ಗದ ಜನರಿಗೆ ಅನುಕೂಲ ಒದಗಿಸಿದೆ ಎಂದು ಹೇಳಿದರು.

ತಿಕೋಟಾ ಹಾಗೂ ಬಬಲೇಶ್ವರ ಮಿನಿ ವಿಧಾನಸೌಧ 6 ತಿಂಗಳ ಹಿಂದೆ ಉದ್ಘಾಟನೆಯಾಗಬೇಕಾಗಿತ್ತು. ಕಾರಣಾಂತರಗಳಿಂದ ಉದ್ಘಾಟನೆ ಯಾಗಲು ಸಾಧ್ಯವಾಗಿರುವುದಿಲ್ಲ. ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಈ ಸುಸಜ್ಜಿತ ಮಿನಿ ವಿಧಾನಸೌಧದಲ್ಲಿ ತಹಶೀಲ್ದಾರ, ಸಬ್ ರಜಿಸ್ಟರ್ ಸೇರಿದಂತೆ ಎಲ್ಲ ಇಲಾಖೆ ಕಚೇರಿಗಳು ಒಂದೇ ಸ್ಥಳದಲ್ಲಿರುವುದರಿಂದ ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಕಚೇರಿಗಳ ಅಲೆದಾಟ ತಪ್ಪಿಸಿ ಒಂದೇ ಸ್ಥಳದಲ್ಲಿ ಸೇವೆ ದೊರಕಲಿರುವುದರಿಂದ ಅನುಕೂಲವಾಗಲಿದೆ ಎಂದು ಹೇಳಿದರು.

ಅತಿ ಎತ್ತರದ ಪ್ರದೇಶವೆಂದೇ ಹೇಳಲಾದ ತಿಕೋಟಾದಲ್ಲಿ ನೀರಾವರಿ ಯೋಜನೆ ಜಾರಿಗೊಳಿಸುವುದು ಅಸಾಧ್ಯವೆಂದೇ ಹೇಳಲಾಗುತ್ತಿದ್ದರೂ ಸಹ ಇಚ್ಛಾಶಕ್ತಿಯಿದ್ದರೇ ಏನೆಲ್ಲ ಸಾಧಿಸಬಹುದೆಂಬುದಕ್ಕೆ ತಿಕೋಟಾ ಕ್ಷೇತ್ರವೇ ಸಾಕ್ಷಿ ಎಂದು ಹೇಳಬಹುದು. ಪೂಜ್ಯ ಶ್ರೀಗಳ ಪ್ರೇರಣೆಯಿಂದ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿದ್ದರಿಂದ ತೀವ್ರ ಭೀಕರ ಬರಗಾಲ ಪರಿಸ್ಥಿತಿ ಇದ್ದರೂ ಸಹ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗಿಲ್ಲ. 3600 ಕೋಟಿ ರೂ. ತಾಲೂಕಿನ ನೀರಾವರಿಗೆ ವೆಚ್ಚ ಮಾಡಲಾಗಿದೆ. ತಿಕೋಟಾ ತಾಲೂಕಿಗೆ 6.8 ಟಿಎಂಸಿ ನೀರು ದೊರಕಿದೆ ಎಂದು ಹೇಳಿದರು.

ಕಳೆದ ಬರಗಾಲ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿ 711 ಟ್ಯಾಂಕರ್ ಮೂಲಕ ನೀರು ಒದಗಿಸಲಾಗಿತ್ತು. ಆದರೆ ಕಳೆದ ಸಲಕ್ಕಿಂತ ಭೀಕರ ಬರಗಾಲ ಜಿಲ್ಲೆಯಲ್ಲಿವಿದ್ದರೂ ಸಹ ನೀರಾವರಿ ಯೋಜನೆಗಳಿಂದ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗಿಲ್ಲ. ಜಿಲ್ಲೆಯಾದ್ಯಂತ ಕೇವಲ 55 ಟ್ಯಾಂಕರ್‌ಗಳ ಮೂಲಕ ಮಾತ್ರ ನೀರು ಪೂರೈಸಲಾಗುತ್ತಿದೆ. ತಿಡಗುಂದಿ, ಚಡಚಣ, ಹೊರ್ತಿ, ಇಂಗಳೇಶ್ವರ, ಗುಂದವಾಣ, ಇಂಚಗೇರಿ, ಜಿಗಜೇವಣಗಿ ಸೇರಿದಂತೆ 16 ಕೆರೆ ತುಂಬಿಸುವುದರಿಂದ ನೀರಿನ ಭವಣೆ ಸಂಪೂರ್ಣ ನಿವಾರಣೆಯಾಗಲಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ತಿಕೋಟಾ ಆಡಳಿತ ಸೌಧ ಉದ್ಘಾಟನೆಗೊಂಡಿದ್ದು, ಮುಂಬರುವ ದಿನಗಳಲ್ಲಿ ಬಬಲೇಶ್ವರ ತಾಲೂಕಾ ಸೌಧ ಉದ್ಘಾಟನೆಯಾಗಲಿದೆ. ಆಡಳಿತ ಸೌಧದಲ್ಲಿ ವಿವಿಧ ಕಚೇರಿಗಳ ಕಾರ್ಯನಿರ್ವಹಣೆಯಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಜಿಪಂ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವಿಜಯಕುಮಾರ ಮೆಕ್ಕಳಕಿ, ತಹಶೀಲ್ದಾರ ಸುರೇಶ ಮುಂಜೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸುಸಜ್ಜಿತ ಹಾಗೂ ಮಾದರಿ ಆಹಾರ ಸಂಸ್ಕರಣ ಘಟಕ ಸ್ಥಾಪನೆ: ಸಚಿವರ ಅಧ್ಯಕ್ಷತೆಯಲ್ಲಿ ಸಭೆ



**ವಿಜಯಪುರ :** ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳಿಗೆ ಯೋಗ್ಯ ಬೆಲೆ ಹಾಗೂ ಆಹಾರ ಉತ್ಪಾದನೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸ್ಥಾಪಿಸಲಾಗುತ್ತಿರುವ ಫುಡ್ ಪಾರ್ಕ್‌ನಲ್ಲಿ ಉಗ್ರಾಣಗಳು, ಶೀತಲಗೃಹಗಳು, ಲ್ಯಾಬೋರೇಟರಿಗಳನ್ನು ನಿರ್ಮಾಣ ಮಾಡಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಜಿಲ್ಲೆಯ ಆಹಾರ ಉತ್ಪಾದನೆ ಹಾಗೂ ಜಿಲ್ಲೆಯ ಬೆಳೆಗಳಿಗೆ ಯೋಗ್ಯ ಬೆಲೆ ದೊರಕುವ ನಿಟ್ಟಿನಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ಶನಿವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಸುಸಜ್ಜಿತ ಫುಡ್ ಪಾರ್ಕ್ ಅಭಿವೃದ್ಧಿ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ವಿವಿಧ ಬೆಳೆಗಾರರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ಸಲಹೆ ನೀಡಿ, 20 ರಿಂದ 25 ಸಾವಿರ ಮೆಟ್ರಿಕ್ ಟನ್ ಸ್ಟೋರೇಜ್‌ಗೆ ಅವಕಾಶವಿದ್ದು, ಅದೇ ಮಹಾರಾಷ್ಟ್ರ ರಾಜ್ಯದ ತಾಸಗಾಂವನಲ್ಲಿ 1ಲಕ್ಷ ಮೆಟ್ರಿಕ್ ಟನ್ ಸ್ಟೋ–ರೇಜ್‌ಗೆ ಅವಕಾಶವಿರುವುದರಿಂದ ಜಿಲ್ಲೆಯಲ್ಲಿನ ಸ್ಟೋರೇಜ್ ಪ್ರಮಾಣ ಹೆಚ್ಚಿಸಬೇಕು. ಆನ್‌ಲೈನ್ ಟ್ರೇಡಿಂಗ್‌ನಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಬೇಕು. ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಪ್ರಮುಖ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ, ನಿಂಬೆ, ತೊಗರಿ, ಜೋಳ, ಗೋವಿನ ಜೋಳ, ಮೆಣಸಿನಕಾಯಿ ಮತ್ತು ಈರುಳ್ಳಿ ಸೇರಿದಂತೆ ವಿವಿಧ ಬೆಳೆಗಳ ಸಂಸ್ಕರಣೆಗೆ ಅವಕಾಶ ಕಲ್ಪಿಸುವುದು, ಸೂಕ್ತ ಪ್ಯಾಕೇಜಿಂಗ್ ವ್ಯವಸ್ಥೆ ಸೇರಿದಂತೆ ವಿವಿಧ ಸಲಹೆಗಳನ್ನು ನೀಡಲಾಯಿತು.

ಜಿಲ್ಲೆಯ ಅಂತರ್ಜಲ ಮಟ್ಟ ಹೆಚ್ಚಾಗಿರುವುದರಿಂದ ಜಿಲ್ಲೆಯಲ್ಲಿ ತರಕಾರಿ ಉತ್ಪಾದನೆ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ನಿರ್ಮಾಣವಾಗುತ್ತಿರುವ ಫುಡ್‌ಪಾರ್ಕ್‌ನಲ್ಲಿ ವಿವಿಧ ಬೆಳೆಗಳೊಂದಿಗೆ ತರಕಾರಿಗಳ ಸಂಸ್ಕರಣೆ ವ್ಯವಸ್ಥೆ ಕಲ್ಪಿಸಬೇಕು. ಅದರಂತೆ ಆನ್‌ಲೈನ್ ಟ್ರೇಡಿಂಗ್ ಸಮಸ್ಯೆ ನಿವಾರಣೆಗೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ವಿಮಾನ ನಿಲ್ದಾಣ ಆರಂಭದಿಂದ ಕಾರ್ಗೋ ಸೇವೆ ಕಾರ್ಯಾರಂಭವಾಗಿ. ಜಿಲ್ಲೆಯ ವ್ಯಾಪಾರ ವಹಿವಾಟಕ್ಕೆ ಅನುಕೂಲವಾಗಲಿದ್ದು, ಸಭೆಯಲ್ಲಿ ಸ್ವೀಕೃತವಾದ ಸಲಹೆ–ಸೂಚನೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಸಭೆಯಲ್ಲಿ ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ, ಆಹಾರ ಸಂಸ್ಕರಣೆ ಹಾಗೂ ಹಾರ್ವೆಸ್ಟಿಂಗ್ ಟೆಕ್ನಾಲಜಿ ವಿಶೇಷ ಕಾರ್ಯದರ್ಶಿ ಶ್ರೀಮತಿ ರೋಹಿಣಿ ಸಿಂಧೂರಿ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಸೇರಿದಂತೆ ವಿವಿಧ ಬೆಳೆಗಾರರು, ರೈತ ಉತ್ಪಾದಕ ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಪ್ರಗತಿಪರ ರೈತರು ಉಪಸ್ಥಿತರಿದ್ದರು.

# ಹಣ್ಣು ಮತ್ತು ಜೇನು ಪ್ರದರ್ಶನ, ಮಾರಾಟ ಮೇಳ: ಹೆಸರು ನೋಂದಣಿಗೆ ಸೂಚನೆ

**ಕೊಪ್ಪಳ :** ಕೊಪ್ಪಳ ತೋಟಗಾರಿಕೆ ಇಲಾಖೆ ವತಿಯಿಂದ ಶಿವರಾತ್ರಿ ಪ್ರಯುಕ್ತ ಮಾರ್ಚ್ 06 ರಿಂದ 09 ರವರೆಗೆ ಹಣ್ಣು ಮತ್ತ ಜೇನು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿದ್ದು, ಮೇಳದಲ್ಲಿ ಭಾಗವಹಿಸಲು ಆಸಕ್ತ ರೈತರು ಹೆಸರು ನೋಂದಾಯಿಸುವಂತೆ ತೋಟಗಾರಿಕೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ತಿಳಿಸಿದ್ದಾರೆ.

ರೈತರಿಂದ ನೇರವಾಗಿ ಗ್ರಾಹಕರಿಗೆ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ದ್ರಾಕ್ಷಿ, ದಾಳಿಂಬೆ, ಕಲ್ಲಂಗಡಿ, ಕರಬೂಜ, ಅಂಜೂರ, ಪೇರಲ, ಜೇನು ಈ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವ ಮತ್ತು ಕೊಪ್ಪಳ ಜಿಲ್ಲೆಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಯೋಗ್ಯ ಬೆಲೆಗೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರಿಂದ ನೇರವಾಗಿ ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ಶಿವರಾತ್ರಿ ಹಬ್ಬದ ಪ್ರಯುಕ್ತ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಮೇಳದಲ್ಲಿ ಭಾಗವಹಿಸುವ ಜಿಲ್ಲೆಯ ಆಸಕ್ತ ದ್ರಾಕ್ಷಿ, ದಾಳಿಂಬೆ, ಕಲ್ಲಂಗಡಿ, ಅಂಜೂರು, ಪೇರಲ ಮತ್ತು ಕರಬೂಜ ಬೆಳೆಗಾರರು ಮುಂಗಡವಾಗಿ ಮಾರಾಟ ಮಳಿಗೆಗಳನ್ನು ಕಾಯ್ದಿರಿಸುವ ಸಲುವಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕು.

ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು, ಆಸಕ್ತ ರೈತರು ತಮ್ಮ ಪಹಣಿ ಪ್ರತಿಯೊಂದಿಗೆ, ತಮ್ಮ ಹೆಸರು, ವಿಳಾಸ, ಸರ್ವೆ ನಂಬರ್, ಬೆಳೆ, ತಳಿಗಳು ಹಾಗೂ ವಿಸ್ತೀರ್ಣ ಮುಂತಾದ ವಿವರಗಳೊಂದಿಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು.

ಹೆಸರು ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಸ್ಥಾನಿಕ ಸಹಾಯಕರು, ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿಪಂ) ಕೊಪ್ಪಳ. ಮೊ:9741057047, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ), ಕೊಪ್ಪಳ ಮೊ:9448511649, ಗಂಗಾವತಿ ಮೊ:9448910277, ಕುಷ್ಟಗಿ ಮೊ:8861697989 ಹಾಗೂ ಯಲಬುರ್ಗಾ ಮೊ:9945644338 ಇವರನ್ನು ಸಂಪರ್ಕಿಸಿ ತಮ್ಮ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯಲು ಹಾಗೂ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಬೆಳಗಾವಿ: ಅಪರಿಚಿತ ಶವ ಪತ್ತೆ

**ಬೆಳಗಾವಿ:** ಬೆಳಗಾವಿ ಗೋವಾವೇಸ್ ರಸ್ತೆಯ ಹತ್ತಿರದ ಎಲ್‌ಐಸಿ ಕಚೇರಿ ಎದುರಗಡೆ ರಾಜೇಶ ಪಾಂಡೆ (45) ಎಂಬುವ ಅಪರಿಚಿತ ವ್ಯಕ್ತಿಯು ಅನಾರೋಗ್ಯದಿಂದ ಬಳಲುತ್ತಿದ್ದನ್ನು ಕಂಡು ಸಾರ್ವಜನಿಕರು ಹೆಚ್ಚಿನ ಚಿಕತ್ಸೆಗಾಗಿ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೆ ರಾಜೇಶ ಪಾಂಡೆ ಎಂಬ ವ್ಯಕ್ತಿಯು ಶುಕ್ರವಾರ (ಮಾ.01) ರಂದು ಮುಂಜಾನೆ 9 ಗಂಟೆಗೆ ಮೃತಪಟ್ಟಿರುತ್ತಾನೆ.

**ಮೃತನ ಚಹರೆ :**

ಮೃತನ ವಯಸ್ಸು 45 ಇರಬಹುದು ಎಂದು ಅಂದಾಜಿಸಲಾಗಿದ್ದು, ದುಂಡು ಮುಖ, ಉದ್ದ ಮೂಗು, ಎತ್ತರವಾದ ಹಣೆ, ಉದ್ದವಾದ ಕಪ್ಪು ಮತ್ತು ಬಿಳಿ ಬಣ್ಣದ ಕೂದಲು, ಚಾಕಲೇಟ್ ಬಣ್ಣದ ಹಾಫ್ ತೋಳಿನ ಟೀ ಶರ್ಟ ಧರಿಸಿರುತ್ತಾನೆ.

ಸದರಿ ಮೃತನ ವಾರಸುದಾರರು ಕಂಡು ಬಂದಲ್ಲಿ ತಿಲಕವಾಡಿ ಪೊಲೀಸ್ ಠಾಣೆಯ ದಾರವಾಣಿ 0831–2405236 ಸಂಖ್ಯೆಗೆ ಸಂಪರ್ಕಿಸಬಹು. ಅಥವಾ ಬೆಳಗಾವಿ ನಗರ ಪೊಲೀಸ್ ಕಂಟ್ರೋಲ್ ರೂಮಗೆ ಸಂಪರ್ಕಿಸಲು ಬೆಳಗಾವಿ ತಿಲಕವಾಡಿ ಪಿಎಸ್‌ಎಚ್‌ಓ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಡೆದ ಮನಸ್ಸುಗಳನ್ನು ಕಟ್ಟುವ ಕೆಲಸ ಕಾಂಗ್ರೆಸ್ ಸರಕಾರದಿಂದ ನಡೆಯುತ್ತಿದೆ: ಲಕ್ಷ್ಮೀ ಹೆಬ್ಬಾಳಕರ್



**ಹಿರೇಬಾಗೇವಾಡಿ (ಬೆಳಗಾವಿ) :** ರಾಜ್ಯದ ಕಾಂಗ್ರೆಸ್ ಸರಕಾರದ ಒಡೆದ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಕೆರೆ ತುಂಬಿಸುವ ಯೋಜನೆಗೆ ಸರ್ಕಾರದಿಂದ 800 ಕೋಟಿ ರೂ,ಗಳ ಅನುದಾನ ಬಿಡುಗ–ಡೆ ಮಾಡಿಸಿರುವ ಹಿನ್ನೆಲೆಯಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದ ಹಿರೇಬಾಗೇವಾಡಿಯಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ಸುತ್ತಮತ್ತಲಿನ ಗ್ರಾಮಸ್ಥರು ಆಯೋಜಿಸಿದ್ದ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರೇಬಾಗೇವಾಡಿ ಗ್ರಾಮಕ್ಕೆ ಕೆರೆ ತುಂಬಿಸುವ ಯೋಜನೆ ತರಬೇಕೆಂದು 2018ರಿಂದ ತಾವು ನಡೆಸಿದ ಹೋರಾಟ, ಯೋಜನೆ ಮಂಜೂರಾಗಿ, ಕಾಮಗಾರಿ ಆರಂಭವಾದ ಸಂದರ್ಭದಲ್ಲಿ ಸರಕಾರ ಬದಲಾಗಿ, ಅದ–ಕ್ಕೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರು ಅಡ್ಡಿಪಡಿಸಿದ ರೀತಿ, ಅದಕ್ಕೆ ಆಗಿನ 13 ಜನ ಬಿಜೆಪಿಯ ಸಂಸದರು, ಶಾಸಕರು ಸಹಿ ಹಾಕಿ ಯೋಜನೆಯನ್ನೇ ರದ್ದುಪಡಿಸಿದ ಸಂದರ್ಭ ಎಲ್ಲವನ್ನೂ ನೆನಪಿಸಿದ ಲಕ್ಷ್ಮೀ ಹೆಬ್ಬಾಳಕರ್, ಜನರಿಗಾಗಿ ಮಾಡಿದ ಕೆಲಸಕ್ಕೆ ಅಡ್ಡಗಾಲು ಹಾಕುವ ಮನಸ್ಥಿತಿಗಳ ಕುರಿತು ಸಾಧ್ಯಂತವಾಗಿ ವಿವರಿಸಿದರು.

ನಾನು ವಿಶ್ವವಿದ್ಯಾಲಯ ಬರುವುದನ್ನು ವಿರೋಧಿಸಿರಲಿಲ್ಲ. ಸ್ವಲ್ಪ ಜಾಗವನ್ನು ಅದಾಗಲೇ ಮಂಜೂರಾಗಿದ್ದ ಕೆರೆತುಂಬಿಸುವ ಯೋಜನೆಗೆ ಬಿಟ್ಟುಕೊಡುವಂತೆ ಕೇಳಿದ್ದೆ. ಆದರೆ ಕೆರೆ ತುಂಬಿಸುವ ಯೋಜನೆ ಬರಲೇಬಾರದೆನ್ನುವ ಹುನ್ನಾರದಿಂದ ಏನೆಲ್ಲ ಮಾಡಿದರು. ನಮ್ಮ ರೈತರನ್ನು ಕುಡುಕರು ಎಂದು ಅವಮಾನ ಮಾಡಿದರು. ರೈತರ ಜಮೀನು ಪಡೆದು, ರೈತರಿಗೇ ನಡೆದಾಡಲು ಜಾಗವಿಲ್ಲದಂತೆ ಮಾಡಿದರು. ಆದರೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ಹಿಡಿದ ಕೆಲಸ ಬಿಡದೆ ಯೋಜನೆಯನ್ನು ಮರು ಮಂಜೂರು ಮಾಡಿಸಿದ್ದೇನೆ ಎಂದು ಲಕ್ಷ್ಮೀ ಹೆಬ್ಬಾಳಕರ್ ಅತ್ಯಂತ ಭಾವುಕರಾಗಿ ವಿವರಿಸಿದರು.

ಬಾಗೇವಾಡಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಅತ್ಯಂತ ಎತ್ತರಕ್ಕೆ ಒಯ್ಯಬೇಕೆನ್ನುವ ಕನಸು ಇಟ್ಟುಕೊಂಡು ನಾನು ಕೆಲಸ ಮಾಡುತ್ತಿದ್ದೇನೆ. ಯಾರ ಮೇಲೂ ದ್ವೇಷವಾಗಲಿ, ಬೇಸರವಾಗಲಿ ಇಲ್ಲ. ಎಲ್ಲವನ್ನೂ ಅಲ್ಲಲ್ಲೇ ಬಿಟ್ಟು ಮುನ್ನಡೆಯುವ ಸ್ವಭಾವ ನನ್ನದು. ಆದರೆ ಜನರಿಗಾಗಿ ಆಗಬೇಕಾದ ಕೆಲಸವನ್ನು ಉಡು ರೀತಿಯಲ್ಲಿ ಪಟ್ಟುಬಿಡದೆ ಮಾಡಿಸುತ್ತೇನೆ. ರೈತರಿಗೆ, ದನಕರುಗಳಿಗೆ, ಜಮೀನಿಗೆ ಶಾಶ್ವತವಾಗಿ ನೀರು ಒದಗಿಸುವ ಪುಣ್ಯದ ಕೆಲಸವನ್ನು ಮಾಡುತ್ತಿದ್ದೇನೆ. ನಬಾರ್ಡ್ ನಿಂದಲೇ ಯೋಜನೆ ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ಈಗ ಯಾರೂ ಅಡ್ಡಿಪಡಿಸಲು ಸಾಧ್ಯವಿಲ್ಲ. ಜೊತೆಗೇ ವಿಶ್ವವಿದ್ಯಾಲಯವನ್ನೂ ಬೆಳೆಸುತ್ತೇನೆ ಎಂದು ಅವರು ಶಪಥ ಮಾಡಿದರು.

ಈಗಾಗಲೆ ರೈತರಿಗಾಗಿ ರಸ್ತೆ ನಿರ್ಮಾಣ ಮಾಡಲು 9 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ. ಗ್ರಾಮ ದೇವಿಯ ಜಾತ್ರೆ ಬರುತ್ತಿರುವುದರಿಂದ ಸುತ್ತಲಿನ 14 ದೇವಸ್ಥಾನಗಳ ಸೌಂದರ್ಯೀಕರಣ, ಗ್ರಾಮದ ಅಭಿವೃದ್ಧಿ ಎಲ್ಲವನ್ನೂ ಮಾಡಿಸುತ್ತಿದ್ದೇನೆ. ಹಿರೇಬಾಗೇವಾಡಿ ಜನರೊಂದಿಗೆ ನಾನಿದ್ದೇನೆ. ನನ್ನೊಂದಿಗೆ ನೀವೆಲ್ಲ ಇದ್ದೀರಿ. ಪರಸ್ಪರ ಬಿಟ್ಟು ಇರಲು ಸಾಧ್ಯವಿಲ್ಲ, ಬೇರೆ ಯಾರೂ ಈ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ. ಕ್ಷೇತ್ರದ ಸುಧಾರಣೆಗಾಗಿ ಎಂತಹ ಪರಿಸ್ಥಿತಿಯನ್ನೂ ಎದುರಿಸಲು ಸಿದ್ಧಳಿದ್ದೇನೆ ಎಂದು ಸಚಿವರು ತಿಳಿಸಿದರು.

ಈ ಹಿಂದೆ ರಾಜ್ಯದಲ್ಲಿ ಆಡಳಿತದಲ್ಲಿದ್ದ ಬಿಜೆಪಿಯವರು ಎಂತಹ ಪರಿಸ್ಥಿತಿಯಲ್ಲಿ ಅಧಿಕಾರ ಬಿಟ್ಟು ಹೋದರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮಂಜೂರಾಗಿದ್ದಕ್ಕಿಂತ 2 –3 ಪಟ್ಟು ಹೆಚ್ಚು ಮೊತ್ತದ ವರ್ಕ್ ಆರ್ಡರ್ ಕೊಟ್ಟು ಹೋದರು. ಅವನ್ನೆಲ್ಲ ಕ್ಲಿಯರ್ ಮಾಡುವ ಜೊತೆಗೆ, ನಾವು ಜನರಿಗೆ ವಚನ ಕೊಟ್ಟಿದ್ದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಇಡೀ ರಾಜ್ಯದಲ್ಲಿ ಒಡೆದ ಮನಸ್ಸುಗಳನ್ನು ಕಟ್ಟುವ ಜೊತೆಗೆ ಅಭಿವೃದ್ಧಿಯನ್ನೂ ಮಾಡುತ್ತಿದ್ದೇವೆ. ನಮ್ಮ ಸರಕಾರಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಲಕ್ಷ್ಮೀ ಹೆಬ್ಬಾಳಕರ್ ವಿನಂತಿಸಿದರು.

ಅತ್ಯಂತ ಅಪರೂಪದ ಕಾರ್ಯಕ್ರಮದಲ್ಲಿ ಸಮಗ್ರ ಗ್ರಾಮಸ್ಥರ ಪರವಾಗಿ ಸಚಿವರನ್ನು ಸನ್ಮಾನಿಸಿದ್ದಲ್ಲದೆ, ಪ್ರತಿ ಗ್ರಾಮದ ಜನರೂ ಪ್ರತ್ಯೇಕವಾಗಿಯೂ ಸತ್ಕರಿಸಿದರು. ಅಲ್ಲದೆ ಸಮಾರಂಭದಲ್ಲಿ ಭಾಗವಹಿಸಿದ್ದ ಮಠಾಧೀಶರು ಸಹ ಸಚಿವರ ಕಾರ್ಯವನ್ನು ಪ್ರಶಂಸಿಸಿ, ಸನ್ಮಾನ ಮಾಡಿದರು.

ಬಡೇಕೊಳ್ಳಮಠದ ಶ್ರೀ ನಾಗೇಂದ್ರ ಮಹಾಸ್ವಾಮಿಗಳು, ಮುತ್ನಾಳ ಕೇದಾರ ಶಾಖಾಪೀಠದ ಶ್ರೀ ಶಿವಾನಂದ ಶಿವಾಚಾರ್ಯರು, ಅರಳಿಕಟ್ಟಿಯ ಶ್ರೀ ಶಿವಮೂರ್ತಿ ದೇವರು, ಜಾಲಿಕರೆಮ್ಮ ದೇವಿಯ ಆರಾಧಕರಾದ ಶ್ರೀ ಉಳವಪ್ಪ ಅಜ್ಜನವರು, ಹಿರೇಬಾಗೇವಾಡಿಯ ಅಶ್ರಫ್ ಪೀರ್ ಖಾದ್ರಿ ಅಜ್ಜನವರು, ತಾರಿಹಾಳದ ಶ್ರೀ ಅಡವಿ ಸಿದ್ದೇಶ್ವರ ದೇವರು ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿದ್ದರು.

ಈ ಸಂದರ್ಭದಲ್ಲಿ ಸಿ ಸಿ ಪಾಟೀಲ, ಸುರೇಶ ಇಟಗಿ, ಶ್ರೀಕಾಂತ ಮಾದುಬರಮಣ್ಣವರ್, ಸ್ಮಿತಾ ಪಾಟೀಲ, ಅಡಿವೇಶ ಇಟಗಿ, ಪ್ರಕಾಶ ಜಪ್ತಿ, ಪುಷ್ಪ ನಾಯ್ಕರ್, ಗೌಸಮೊದ್ದಿನ ಜಾಲಿಕೊಪ್ಪ, ಉಷಾತಾಯಿ ಶಿಂತ್ರೆ, ನಿಂಗಪ್ಪ ತಳವಾರ, ರವಿ ಮೇಳೆದ, ಸುರೇಶ ಕಂಬಿ, ಸಮೀನಾ ನದಾಫ್, ಜಗದೀಶ್ ಯಳ್ಳೂರ, ರುದ್ರಗೌಡ ಪಾಟೀಲ, ಬಸವಂತ ನಾಯ್ಕರ್, ನಾಗಪ್ಪ ಬಾಗೇವಾಡಿ, ಸಿದ್ದು ಹಾವಣ್ಣವರ, ಶಿವಾನಂದ ಚಂಡು, ಚಂಬಪ್ಪ ಉಳ್ಳಾಗಡ್ಡಿ ಮೊದಲಾದವರು ಉಪಸ್ಥಿತರಿದ್ದರು.

# ಉಚಿತ ಆರೋಗ್ಯ ತಪಾಸಣಾ ಶಿಬಿರ



**ಗೋಕಾಕ :** ಶಿಕ್ಷಣ , ಆರೋಗ್ಯ , ಸಂಸ್ಕಾರ , ಪರಿಸರ ಹಾಗೂ ಸಹಕಾರ ಎಂಬ ಐದು ತತ್ವದಡಿ ಸಮಾಜಕ್ಕೆ ಏನಾದರೂ ನೀಡಬೇಕು ಎಂಬ ಉದ್ದೇಶದಿಂದ ಮಹಾಂತೇಶ ಕವಟಗಿಮಠ ಫೌಂಡೇಶನ್ ಹುಟ್ಟಿಕೊಂಡಿದೆ ಎಂದು ವಿಧಾನ ಪರಿ?ತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ಕೆಎಲ್‌ಇ ಶಾಲಾ ಆವರಣದಲ್ಲಿ ಮಹಾಂತೇಶ ಕವಟಗಿಮಠ ಫೌಂಡೇಶನ್ ವತಿಯಿಂದ ಹಾಗೂ ಕೆಎಲ್‌ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಆರೋಗ್ಯ ಇಲ್ಲ ಎಂದರೆ ಏನು ಇಲ್ಲ ಇಂದಿನ ಆಧುನಿಕ ಯುಗದಲ್ಲಿ ಜನರು ಆರೋಗ್ಯವನ್ನು ಕಾಪಾಡಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಮಾಜ ಸೇವಾ ಸಂಘಟನೆಗಳು ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಮತ್ತು ಬಟಕುರ್ಕಿಯ ಸಂಗನಬಸವ ಮಹಾಸ್ವಾಮಿಗಳು ವಹಿಸಿದ್ದರು.

ಈ ಸಂದರ್ಭದಲ್ಲಿ ಕೆಎಲ್‌ಇ ನಿರ್ದೇಶಕ ಜಯಾನಂದ ಮುನ್ನವಳ್ಳಿ, ಜಿಪಂ ಮಾಜಿ ಸದಸ್ಯ ಟಿ.ಆರ್.ಕಾಗಲ್, ಮಡ್ಡೆಪ್ಪ ತೋಳಿನವರ, ಕಾಂಗ್ರೆಸ್ ಮುಖಂಡ ಅಶೋಕ್ ಪೂಜಾರಿ, ಡಾ.ಧರೆಪ್ಪ ಚೌಗಲಾ ,ಎಂ.ಡಿ.ಚುನಮರಿ, ಮಲ್ಲಿಕಾರ್ಜುನ ಈಟಿ, ರಾಮಣ್ಣ ಹುಕ್ಕೇರಿ, ನಾರಾಯಣ ಮಠಾಧೀಕಾರಿ, ಆನಂದ ಪಾಟೀಲ, ಡಾ.ಕಿರಣಕುಮಾರ ಪೂಜಾರ, ಡಾ.ನವೀನ ಅಂಗಡಿ, ಡಾ.ವಿಶ್ವನಾಥ್ , ಡಾ.ಮಹಾದೇವಿ ಸವಣೂರು, ಡಾ.ಅಮೂಲ ಎಸ್. ಡಾ.ವೀಣಾ, ಡಾ.ಪ್ರೀತಿ ಶೆಟ್ಟಿ, ಡಾ.ಭಾಗ್ಯಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ಮೂಡಲಗಿ : ಕಲ್ಲೋಳಿ ಪಟ್ಟಣದ ದುರ್ಗಾದೇವಿ ದೇವಸ್ಥಾನ ಹತ್ತಿರದ ಅಂಗನವಾಡಿ ಕೇಂದ್ರ 421ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಆಯೋಜಿಸಿದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನಕ್ಕೆ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಮಗುವಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.**

**ಈ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಅಧಿಕಾರಿ ಯಲ್ಲಪ್ಪ ಗದಾಡಿ, ಪಟ್ಟಣ ಪಂಚಾಯತ ಸದಸ್ಯೆ ಲಕ್ಷ್ಮೀ ಗಾಣಿಗೇರ, ಪ್ರಮುಖರಾದ ಹಣಮಂತ ಸಂಗಟಿ, ಶಿವಪ್ಪ ಬಿ.ಪಾಟೀಲ, ಅಡಿವೆಪ್ಪ ಕುರಬೇಟ, ಈರಣ್ಣ ಮುನ್ನೋಳಿಮಠ, ಮಂಜುಳಾ ಹಿರೇಮಠ, ವೈದ್ಯಾಧಿಕಾರಿ ಡಾ. ಸವಿತಾ ಮೂಡಲಗಿ ಸೇರಿದಂತೆ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.**



**ಮೂಡಲಗಿ : ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಅವರು ಸಾರ್ವಜನಿಕರು ಮಗುವಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.**

**ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಡಾ. ಭಾರತಿ ಕೋಣಿ, ಈ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಅಧಿಕಾರಿ ಯಲ್ಲಪ್ಪ ಗದಾಡಿ, ಆರೋಗ್ಯ ಸಲಹಾ ಸಮಿತಿ ಸದಸ್ಯರು, ಲಯನ್ಸ್‌ಕ್ಲಬ್ ಮೂಡಲಗಿ ಪರಿವಾರ ಅಧ್ಯಕ್ಷ ಶ್ರೀಶೈಲ್ ಲೋಕನ್ನವರ, ಡಾ ಎಸ್ ಎಸ್ ಪಾಟೀಲ್, ವೆಂಕಟೇಶ ಸೋನವಾಲಕರ, ಸುಪ್ರೀತ ಸೋನವಾಲಕರ, ಕೃಷ್ಣಾ ಕೆಂಪಸತ್ತಿ, ಪುರಸಭೆ ಆರೋಗ್ಯ ನೀರಿಕ್ಷಕ ಚಿದಾನಂದ ಮುಗಳಖೋಡ , ಪುರಸಭೆ ಸದಸ್ಯರು, ಸೇರಿದಂತೆ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.**

# ವಿಜಯಪುರ (ಬಿಜಾಪುರ) ಲೋಕಸಭಾಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಪದಾಧಿಕಾರಿಗಳ ಅವಲೋಕನ ಸಭೆ




**ಬೆಳಗಾವಿ :** ದಿನಾಂಕ 02–03–2024 ರಂದು ವಿಜಯಪುರ (ಬಿಜಾಪುರ) ಲೋಕಸಭಾಕ್ಷೇತ್ರದ ಭಾರತೀಯಜನತಾ ಪಾರ್ಟಿ ಪದಾಧಿಕಾರಿಗಳು, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರಜೊತೆ ಅವಲೋಕನ ಸಭೆ ನಡೆಸಲಾಯಿತು.

ಲೋಕಸಭಾಚುನಾವಣಾ ಪ್ರಯುಕ್ತಜಿಲ್ಲಾ ಹಾಗೂ ಮಂಡಳ ಪದಾಧಿಕಾರಿಗಳ ಅಭಿಪ್ರಾಯ ಸಂಗ್ರಹಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಉಪಾಧ್ಯಕ್ಷರಾದ ಅನಿಲ ಬೆನಕೆ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಪ್ರೀತಮಗೌಡ, ವಿಜಯಪುರಜಿಲ್ಲಾಅಧ್ಯಕ್ಷರಾದ ಶ್ರೀ ಆರ್. ಎಸ್. ಪಾಟೀಲ (ಕುಚುಬಾಳ) ಹಾಗೂ ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು ಮತ್ತು ಮಂಡಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಂಶೋಧನೆ ತಾಳ್ಮೆಯಿಂದ ಮಾಡುವ ಕೆಲಸ



**ಧಾರವಾಡ :** ಸಂಶೋಧನೆತುಂಬ ತಾಳ್ಮೆಯಿಂದ ಮಾಡುವ ಕೆಲಸವಾಗಿದೆ. ಸಂಶೋಧಕನ ವಿಷಯವೇಕಣ್ಣ ಮುಂದಿನ ಬೆಳಕು. ಸಂಶೋಧಕಜಾತ್ಯಾತೀತ ವ್ಯಕ್ತಿಯಾಗಿಕಾರ್ಯ ಮಾಡಬೇಕೆಂದುಡಾ. ಎಸ್.ಪಿ.ಪದ್ಮಪ್ರಸಾದ ಹೇಳಿದರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘವು ರಾ.ಹ. ದೇಶಪಾಂಡೆ ಸಭಾಭವನದಲ್ಲಿ ನಾಡಿನ ಹಿರಿಯ ಸಂಶೋಧಕರಾದಡಾ. ಬಿ.ವ್ಹಿ. ಶಿರೂರ ದತ್ತಿ ಅಂಗವಾಗಿ ಆಯೋಜಿಸಿದ್ದ ಡಾ. ಬಿ.ವ್ಹಿ. ಶಿರೂರ ಸಂಶೋಧನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿಡಾ. ಬಿ.ವ್ಹಿ. ಶಿರೂರ ಸಂಶೋಧನ ಪ್ರಶಸಿ-2024 ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದಅವರು, ಆರ್.ನರಸಿಂಹಾಚಾರ್, ಡಿ.ಎಲ್‌ಎನ್. ಎಂ.ಎಂ. ಕಲಬುರ್ಗಿ, ಬಿ.ವ್ಹಿ. ಶಿರೂರ ಅವರಂಥವರ ಸಂಶೋಧಕರ ಕಾರ್ಯಗಳನ್ನು ಸ್ಮರಿಸಿದರು. ಈಗ ಅಂಥಗುಣಮಟ್ಟದ ಸಂಶೋಧನೆಗಳು ಬರುತ್ತಿಲ್ಲ. ಗಟ್ಟಿಕಾಯಿಗಿಂತ ಜೊಳ್ಳು ಕಾಳುಗಳ ಸಂಖ್ಯೆ ಹೆಚ್ಚುತ್ತಿದೆಎಂದು ವಿಷಾಧಿಸಿದರು.ಡಾ. ಬಿ.ವ್ಹಿ. ಶಿರೂರ ಸಂಶೋಧನ ಪ್ರಶಸ್ತಿ ಬಂದಿರುವುದು ಸಂತಸತಂದಿದೆಎಂದು ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಕೆ.ರವೀಂದ್ರನಾಥಅವರುಡಾ. ಪದ್ಮಪ್ರಸಾದಅವರ ಸಂಶೋಧನೆ ಮತ್ತು ಸಾಹಿತ್ಯಿಕ ಸಾಧನೆಗಳನ್ನು ಆಧಾರಗಳೊಂದಿಗೆ ವಿವರಿಸಿದರು.

ದತ್ತಿಕಾರ್ಯಕ್ರಮದಲ್ಲಿ ಭಾಗವಹಿಸಿದ ಡಾ. ಬಿ.ವ್ಹಿ. ಶಿರೂರ ಅವರ ನನ್ನ ವಿದ್ಯಾರ್ಥಿ ಬಳಗವೇ ಬಹಳ ದೊಡ್ಡ ಬಂಡವಾಳ. ಹನುಮಾಕ್ಷಿ ಗೋಗಿ ಅವರಂಥವರು ಸಂಶೋಧನಕ್ಷೇತ್ರದಲ್ಲಿ ಮಾಡುವ ಕೆಲಸ ಇನ್ನೂ ಬಹಳವಿದೆ ಎಂದಅವರುತಮ್ಮ ವಿದ್ಯಾರ್ಥಿಗಳು ಮತ್ತು ಕುಟುಂಬದವರುಇಟ್ಟ ದತ್ತಿದಾನಿಗಳನ್ನು ಸ್ಮರಿಸಿದರು.

ಚಂದ್ರಕಾಂತ ಬೆಲ್ಲದಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿವಾನಂದ ಹೂಗಾರ ಪ್ರಾರ್ಥಿಸಿದರು. ಸತೀಶತುರಮರಿ ಸ್ವಾಗತಿಸಿದರು. ಡಾ. ಸಣ್ಣವೀರಣ್ಣದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಧನವಂತ ಹಾಜವಗೋಳ ನಿರೂಪಿಸಿದರು. ವೀರಣ್ಣ ಒಡ್ಡಿನ ವಂದಿಸಿದರು.

ಪ್ರೊ.ಮಾಲತಿ ಪಟ್ಟಣಶೆಟ್ಟಿ, ಶಂಕರ ಹಲಗತ್ತಿ, ಗುರು ಹಿರೇಮಠ, ಡಾ.ಮಹೇಶ ಹೊರಕೇರಿ, ಡಾ.ಶಾಂತಿನಾಥ ದಿಬ್ಬದ, ಮಲ್ಲಿಕಾರ್ಜುನ ಹಿರೇಮಠ, ನಿಂಗಣ್ಣಕುಂಟಿ, ಡಾ. ಲಿಂಗರಾಜಅಂಗಡಿ, ಸುರೇಶ ಹೊರಕೇರಿ, ಎಂ.ಎಂ. ಚಿಕ್ಕಮಠ, ಡಾ.ಬಳಪ್ಪ ಚಿನಗುಡಿ, ಗಂಗಾಧರಗಡಾದ, ಕೆ.ಎಂ.ಅಂಗಡಿ ಸೇರಿದಂತೆ ಮುಂತಾದವರಿದ್ದರು.

# ಕನಕಗಿರಿ ಉತ್ಸವ: ಕೈಬೀಸಿ ಕರೆಯುತಿದೆ ಫಲ-ಪುಷ್ಪ ಪ್ರದರ್ಶನ



**ಕೊಪ್ಪಳ :** ಕನಕಗಿರಿ ಉತ್ಸವ 2024ರ ವಿಶೇಷವಾಗಿ ಕನಕಗಿರಿಯಲ್ಲಿ ಈ ಬಾರಿ ತೋಟಗಾರಿ-ಕೆ ಇಲಾಖೆಯು ಆಯೋಜಿಸಿರುವ ಫಲ-ಪುಷ್ಪ ಪ್ರದರ್ಶನವು ತುಂಬಾ ಆಕರ್ಷಣೀಯವಾಗಿದ್ದು, ಜನರನ್ನು ತನ್ನತ್ತ ಕೈಬೀಸಿ ಕರೆಯುವಂತಿದೆ.

ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ: ಕನಕಗಿರಿ ಉತ್ಸವದ ಪ್ರಯುಕ್ತ ತೋಟಗಾರಿಕೆ ಇಲಾಖೆಯಿಂದ ಎ.ಪಿ.ಎಮ್.ಸಿ ಸಮುದಾಯ ಭವನ ಹಿಂಭಾಗದ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಫಲಪುಷ್ಪ ಪ್ರದರ್ಶನ-2024ಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಚಿಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ, ಕನಕಗಿರಿ ತಹಶೀಲ್ದಾರರಾದ ವಿಶ್ವನಾಥ ಮುರಡಿ, ತಾಲ್ಲೂಕು ಪಂಚಾಯತ್ ಇಓ ಚಂದ್ರಶೇಖರ ಕಂದಕೂರ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಬಗೆಯ ಹೂ ಮತ್ತು ಹಣ್ಣಿನ ಮಾದರಿಗಳು: ಫಲಪುಷ್ಪ ಪ್ರದರ್ಶನದಲ್ಲಿ ವಿವಿಧ ಬಗೆಯ ಹೂವಿನ ಮತ್ತು ಹಣ್ಣಿನ ಮಾದರಿಗಳನ್ನು ಸಿದ್ಧಪಡಿಸಲಾಗಿದೆ. ಹೂವಿನ ಜೋಡಣೆ ಮುಖಾಂತರ ವಿವಿಧ ರೀತಿಯ ಮಾದರಿಯ ಸ್ತಬ್ಧ ಚಿತ್ರಗಳ ಮೂಲಕ ಜನರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ವಿಶೇಷವಾಗಿ ನಾಡದೇವತೆಯಾದ ಭುವನೇಶ್ವರಿ ದೇವಿ, ಸಾಂಸ್ಕೃತಿಕ ನಾಯಕ ಬಸವಣ್ಣನವರು, ಭಗವಾನ್ ಬುದ್ಧ, ಭಾರತ ರತ್ನ ಸಂವಿಧಾನ ಶಿಲ್ಪಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್, ಸಂವಿಧಾನ ಪುಸ್ತಕದ ಮುಖಪುಟದ ಸ್ತಬ್ಧ ಚಿತ್ರಗಳು ಹಾಗೂ ಕನಕಗಿರಿಯ ತೋಟಗಾರಿಕೆ ಹೈಟೆಕ್ ಟೆಕ್ನಾಲಜಿ ಪಾರ್ಕನ್ ಮಾದರಿ ಮುನ್ನೋಟ, ಕನಕಚಲಪತಿ ದೇವಸ್ಥಾನದ ಗೋಪುರಗಳ ಸ್ತಬ್ಧ ಚಿತ್ರ ವಿವಿಧ ಮಾದರಿಯ ಅಲಂಕಾರಿಕ ಗಿಡಗಳ ಜೋಡಣೆ, ಕ್ಯಾಕ್ಟಸ್ ಮಾದರಿ, ವರ್ಟಿಕಲ್ ಮಾದರಿ, ತ್ರೀಕೋನಾಕಾರ ಅಲಂಕಾರಿಕ ಗಿಡಗಳ ಮಾದರಿ, ಹುಲ್ಲಿನ ಮಾದರಿಯ ನೀರಿನ ಜಲಪಾತ ಅನಾವರಣ, ವಿವಿಧ ಹಣ್ಣು ಮತ್ತು ತರಕಾರಿಗಳ ಕೆತ್ತನೆ, ಜಿಲ್ಲೆಯ ರೈತರು ಬೆಳೆದ ತೋಟಗಾರಿಕೆ ಬೆಳೆಗಳ ಪ್ರದರ್ಶಿಕೆಗಳು,

ವಿವಿಧ ಅಲಂಕಾರಿಕ ಕುಂಡಗಳ ಜೋಡಣೆ, ಬಣ್ಣ ಬಣ್ಣದ ಹೂವುಗಳ ಮತ್ತು ತರಕಾರಿಗಳ ಜೋಡಣೆ ಹಾಗೂ ಇಲಾಖೆಯ ಯೋಜನೆಗಳ ಮಾಹಿತಿಗಳ ಬಗ್ಗೆ ವಿವರಣೆ ಹಾಗೂ ತೋಟಗಾರಿ-ಕೆ ಕ್ಷೇತ್ರಗಳಲ್ಲಿ ಉತ್ಪಾದಿಸಿದ ಪರಿಕರಗಳ ಪ್ರದರ್ಶನವನ್ನು ಈ ಫಲಪುಷ್ಪ ಪ್ರದರ್ಶನದಲ್ಲಿ ಅನಾವರಣಗೊಳಿಸಲಾಗಿದೆ.

ಎಲ್ಲಾ ಸಾರ್ವಜನಿಕರು ಮತ್ತು ರೈತರು ಫಲಪುಷ್ಪ ಪ್ರದರ್ಶನವನ್ನು ಕಣ್ಣುಂಬಿಕೊಳ್ಳಬೇಕೆಂದು ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ತಿಳಿಸಿದ್ದಾರೆ.

# ಕನಕಗಿರಿ ಉತ್ಸವ: ಕವಿಗೋಷ್ಠಿಯಲ್ಲಿ ಹಿರಿಯ ಸಾಹಿತಿ ಎ.ಎಂ ಮದರಿ ಸಲಹೆ ಬರಹದ ಮೂಲಕ ಸಮಾಜವನ್ನು ಬಡಿದೆಬ್ಬಿಸುವ ಕೆಲಸ ಮಾಡಬೇಕು




**ಕೊಪ್ಪಳ :** ಬರಹದ ಮೂಲಕ ಸಮಾಜವನ್ನು ಬಡಿದೆಬ್ಬಿಸುವ ಕೆಲಸ ಮಾಡಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿಗಳಾದ ಎ.ಎಂ ಮದರಿ ಅವರು ಸಲಹೆ ನೀಡಿದರು.

ಕನಕಗಿರಿ ಉತ್ಸವ-2024ರ ಹಿನ್ನೆಲೆಯಲ್ಲಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ವೇದಿಕೆಯಲ್ಲಿ ಆಯೋಜಿಸಲಾಗಿದ್ದ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಸಾಹಿತಿಯಾದವರು ಕಾವ್ಯದ ಮೂಲಕ ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು. ಸಾಹಿತಿ ಕಾವ್ಯದ ಮೂಲಕ ನಾಯಕನಾಗಬೇಕು. ರೈತನ ಸಂಕಷ್ಟ, ಹಸಿವು, ಮಹಿಳೆಯ ದೌರ್ಜನ್ಯ ತಡೆ ಕುರಿತಾದ ಕವಿತೆಗಳನ್ನು ರಚಿಸಬೇಕು. ಬರಹವು ಜನರ ಮನಸ್ಸುಗಳಿಗೆ ಮುಟ್ಟಬೇಕು. ಕವಿಗಳು ನಿರಂತರ ಅಧ್ಯಯನ ಮತ್ತು ಅನುಭವದಿಂದ ಬೆಳೆಯುತ್ತಾರೆ. ಅಂತೆಯೇ ಇಂದಿನ ದಿನಗಳಲ್ಲೂ ಗಟ್ಟಿಯಾಗಿ ಬರೆಯುವರಿದ್ದಾರೆ. ಬಂಡಾಯ, ನವ್ಯ, ನವೋದಯ, ಸಾಹಿತ್ಯದೊಂದಿಗೆ ಗಜಲ್, ಹೈಕ್, ಟಂಕಾ ಕಾವ್ಯಗಳಂತ ಸಾಹಿತ್ಯ ಪ್ರಕಾರಗಳು ಬೆಳೆಯುತ್ತಿವೆ. ವಚನಗಳು, ದಾಸರ ಸಾಹಿತ್ಯ ಕಲ್ಯಾಣ ಕರ್ನಾಟಕದಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಗಜಲ್ ಕವಿ ಅಲ್ಲಾಗಿರಿರಾಜ್ ಅವರು ಆಶಯ ನುಡಿಗಳನ್ನಾಡಿ, ಕವಿಗಳು ಬರೆಯುವ ಸಾಲುಗಳಿಗೆ ಎಂದು ಸಾವಿಲ್ಲ. ಕವಿತೆಗಳನ್ನು ಅನುಭವಿಸಬೇಕು. ಹಸಿದವನಿಗೆ ಅನ್ನ ಕೊಡುವ ಕವಿತೆಗಳನ್ನು ರಚಿಸಿ, ದೇಶದ ರಾಜಕಾರಣವನ್ನು ತಿದ್ದಲು ಕವಿ ಜನಿಸಬೇಕು. ಜಾತಿ, ಧರ್ಮದ, ರಾಜಕಾರಣವನ್ನು ಸರಿಪಡಿಸುವ ಪ್ರಯತ್ನ ಕವಿಯದು. ರೀಲ್ಸ್ ಹಾಡುಗಳಿಗೆ ವೇದಿಕೆಯ ಅವಶ್ಯವಿಲ್ಲ. ಕವಿ, ಸಾಹಿತಿ, ಹಗಲು ವೇಷಾಧಾರಿಗಳಿಗೆ ಕೊಟ್ಯಾಂತರ ವೇದಿಕೆಯನ್ನು ಬಳಸಿ, ಉತ್ಸವಗಳು ಜನರ ನಾಡಿ ಮೀಡಿತ ಅರಿಯಬೇಕೆಂದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳದ ಹಿರಿಯ ಸಾಹಿತಿಗಳಾದ ಅಲ್ಲಮ ಪ್ರಭು ಬೆಟ್ಟದೂರು ಮಾತನಾಡಿ, ಇಂತಹ ಕವಿಗೋಷ್ಠಿಗೆ ಬೆಳೆಯುವಂತಹ ಮಕ್ಕಳನ್ನು ಕರೆತರುವ ವ್ಯವಸ್ಥೆಯಾಗಬೇಕು. ಕೇವಲ ಗಂಭೀರ ಕವಿತೆ, ಹೊರಾಟದ ಕವಿತೆಗಳು ಅಷ್ಟೆ ಅಲ್ಲದೆ, ಲಘು ಕವಿತೆಗಳನ್ನು ಸಹ ಬರೆಯುವಂತಹ ರೂಡಿ ನಮ್ಮ ಕವಿಗಳಲ್ಲಿ ಬರಬೇಕು. ಬರಹ, ಕವಿತೆಗಳು ನಮ್ಮ ಸಂವಿಧಾನ ಬಹುಸಂಸ್ಕೃತಿಯನ್ನು ಎತ್ತಿಹಿಡಿದಿವೆ. ಬೌದ್ಧ, ಶೈವ, ಜೈನ, ವೀರಶೈವ, ಲಿಂಗಾಯತ, ಪಾರ್ಸಿ, ಮುಸಲ್ಮಾನ, ಕ್ರೈಸ್ತ ಇನ್ನೂ ಅನೇಕ ಧರ್ಮಿಯರು ಇಲ್ಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 60ಕ್ಕೂ ಹೆಚ್ಚು ಕವಿಗಳು ಭಾಗಿಯಾಗಿ, ವಿಭಿನ್ನ ರೀತಿಯ ಕವಿತೆಗಳನ್ನು ವಾಚನ ಮಾಡುವುದರ ಮೂಲಕ ಜನರ ಮನಸ್ಸಿಗೆ ಮುದನೀಡಿದರು.

ಈ ಸಂದರ್ಭದಲ್ಲಿ ಸಾಹಿತಿ ಡಾ.ಅಜಮೀರ್ ನಂದಾಪೂರ, ಉಪನ್ಯಾಸಕ ಡಾ.ಬೆಟ್ಟಪ್ಪ ಜೀರಾಳ, ಪ್ರಾಧ್ಯಾಪಕಿ ಡಾ.ಆಶಿಕಾ ಎಚ್.ಸಿ., ಸಂಶೋಧಕ ಡಾ. ಮಂಜುನಾಥ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಕನಕಗಿರಿ ಉತ್ಸವದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರತಿಪಾದನೆ

## ಐತಿಹಾಸಿ ತಪ್ಪುಗಳನ್ನು ಸರಿಪಡಿಸುವ ಕೆಲಸವಾಗಬೇಕು: ಸರ್ವರಿಗೂ ಸಮಬಾಳು, ಸಮಪಾಲು ದೊರೆಯಬೇಕು

**ಕೊಪ್ಪಳ :** ಸರ್ವರಿಗೂ ಸಮಬಾಳು, ಸಮಪಾಲು ಎಂಬುದನ್ನು ಬಸವಾದಿ ಶರಣರು ಹೇಳಿದರು. ಕುವೆಂಪು ಸರ್ವೋದಯ ಕಲ್ಪನೆಯನ್ನು ಹೇಳಿದರು. ಕೃಷ್ಣದೇವರಾಯ, ನಾಲ್ವಡಿ ಕೃಷ್ಣ ರಾಜ ಒಡೆಯರ್, ಶಾಹುರಾಜ ಮಹಾರಾಜರ ಇತಿಹಾಸ ಇಂದಿನ ಯುವ ಜನತೆಗೆ ತಿಳಿಯಬೇಕು. ಈ ಹಿಂದೆ ಶೂದ್ರರು ಹಾಗೂ ಮಹಿಳೆಯರಿಗೆ ವಿದ್ಯೆ ಕಲಿಯುವ ಅವಕಾಶ ಇರಲಿಲ್ಲ. ಈ ಎಲ್ಲಾ ಇತಿಹಾಸ ತಿಳಿದುಕೊಂಡು ತಪ್ಪುಗಳನ್ನು ಸರಿಪಡಿಸುವ ಕೆಲಸವಾಗಬೇಕು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರತಿಪಾದಿಸಿದರು.

ಕೊಪ್ಪಳ ಜಿಲ್ಲೆಯ ಕನಕಗಿರಿ ಪಟ್ಟಣದಲ್ಲಿ ಶನಿವಾರ ಆಯೋಜಿಸಲಾದ ಕನಕಗಿರಿ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಐತಿಹಾಸಿಕಸ್ಥಳಗಳಲ್ಲಿ ಕನಕಗಿರಿ ಒಂದಾಗಿದೆ. ಇಲ್ಲಿ ನೂರಾರು ದೇವಾಲಯ ಇವೆ. ಶಾಸನಗಳು ಲಭಿಸಿವೆ. ಕನಕಗಿರಿಗೆ ದೊಡ್ಡ ಸಂಸ್ಕೃತಿ ಹಾಗೂ ಇತಿಹಾಸ ಇದೆ. ಇದನ್ನು ಯುವ ಜನತೆಗೆ ತಿಳಿಸಬೇಕು. ಇತಿಹಾಸ ತಿಳಿಯದವರು ಭವಿಷ್ಯ ನಿರ್ಮಿಸಲು ಸಾಧ್ಯವಿಲ್ಲ ಎಂದು ಡಾ.ಬಾಬ ಸಾಹೇಬ ಅಂಬೇಡ್ಕರ್ ಹೇಳಿದ್ದಾರೆ.

ಆದ್ದರಿಂದ ಇಂದಿನ ಯುವ ಜನತೆ ನಮ್ಮ ಇತಿಹಾಸ ತಿಳಿಯಬೇಕು ಆಗ ಮಾತ್ರ ಸುಂದರ ಭವಿಷ್ಯ ಹಾಗೂ ನಾಡು ಕಟ್ಟಬಹುದು. ನಿಮ್ಮ ಕನಸುಗಳ ಸಾಕರ ಮಾಡಿಕೊಳ್ಳಬೇಕು ಜೀವನ ಹಾದಿಯನ್ನು ಅವಲೋಕಿಸಿ, ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಯುವಕರಿಗೆ ಕರೆ ನೀಡಿದರು.

ಸಮಾಜದಲ್ಲಿ ಅಸಮಾನತೆ ಇದೆ. ಇದನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ಬಸವಾದಿ ಶರಣ-ರು ಸಮಾಜದಲ್ಲಿ ಅಸಮಾನತೆ, ಅಂದಶ್ರದ್ಧೆ,ಕಂದಾಚಾರಗಳನ್ನು ತೊಡೆದು ಹಾಕಲು ಶ್ರಮಿಸಿದರು. ಸಮಾಜದಲ್ಲಿ ಏಣಿ ಶ್ರೇಣಿಕೃತ ವ್ಯವಸ್ಥೆ ಇದೆ. ಇಲ್ಲಿ ಹಲವು ಜಾತಿಗಳು ಇವೆ. ಎಲ್ಲರ ಅಭಿವೃದ್ಧಿ ಆಗಬೇಕು. ಜರ್ಮನ್ ದೇಶದಲ್ಲಿ ಹಿಟ್ಲರ್ ಜರ್ಮನ್ ಜನಾಂಗ ಶ್ರೇಷ್ಠ ಎಂದು ಹೇಳಿ, ಯಹೂದಿಗಳ ವಿರುದ್ಧ ಜರ್ಮನರಲ್ಲಿ ದ್ವೇಷ ಬಿತ್ತಿದ. ನಮ್ಮ ದೇಶದಲ್ಲೂ ಹಿಟ್ಲರ್ ಹಾಗೂ ಮುಸಲೋನಿ ಹಿಂಬಾಲಕರು ಇದ್ದಾರೆ. 58 ಲಕ್ಷ ಯಹೂದಿಗಳ ಹತ್ಯೆ ಮಾಡಿದ ಹಿಟ್ಲರ್ ಹೇಡಿಯಾಗಿ ಆತ್ಮಹತ್ಯೆ ಮಾಡಿಕೊಂಡ. ಶ್ರೇಷ್ಠ ಎಂದು ಹೇಳಿಕೊಳ್ಳುವವರು ಮಾನವರೇ ಅಲ್ಲ. ಇನ್ನೊಬ್ಬರನ್ನು ಜಾತಿ ಕೀಳು ಎಂದು ನೋಡುವವರು ಮನುಷ್ಯತ್ವ ಇಲ್ಲದವರು.

ಅಂಜನಾದ್ರಿ ಅಭಿವೃದ್ಧಿಗೆ ರೂ.100 ಕೋಟಿ ನೀಡಿದ್ದೇನೆ. ಹನುಮನನ್ನು ನಾವು ಪೂಜಿಸುತ್ತೇವೆ. ಶ್ರೀರಾಮಚಂದ್ರ, ಸೀತೆ, ಲಕ್ಷ್ಮಣ, ಹನುಮನನ್ನು ಒಟ್ಟಿಗೆ ನೋಡಬೇಕು. ಬರೀ ಶ್ರೀ ರಾಮಚಂದ್ರ ಮಾತ್ರ ನೋಡಬಾರದು. ಯಾವುದೇ ದೇವಾಲಯಗಳಲ್ಲಿ ಬರೀ ಶ್ರೀ ರಾಮಚಂದ್ರ ಮಾತ್ರ ಇಲ್ಲ. ಶ್ರೀರಾಮಚಂದ್ರ ಸೀತೆ, ಲಕ್ಷ್ಮಣ, ಹನುಮ ಎಲ್ಲರೂ ಇರುತ್ತಾರೆ. ಅವಿಭಕ್ತ ಕುಟುಂಬ ನಮ್ಮ ಇತಿಹಾಸ ಪರಂಪರೆ ಹಾಗೂ ಸಂಸ್ಕೃತಿ ಇದನ್ನು ತಿಳಿದುಕೊಳ್ಳಬೇಕು ಎಂದರು.

ರಾಜಕೀಯ ಆರಂಭದಲ್ಲಿ ಕೊಪ್ಪಳ ಕ್ಷೇತ್ರದಲ್ಲಿ ಸಂಸದ ಸ್ಥಾನಕ್ಕೆ ಸ್ಪರ್ಧಿಸಿದ್ದೆ, ಆಗ ಕರಡಿ ಸಂಗಣ್ಣ ನಮ್ಮ ಜೊತೆ ಇದ್ದರು. ರಾಜೀವ್ ಗಾಂಧಿ ಹತ್ಯೆ ಅನುಕಂಪದ ಆಧಾರದಲ್ಲಿ ಅಂದಿನ ಕಾಂಗ್ರೆಸ್ ಅಭ್ಯರ್ಥಿ ಗೆಲವು ಸಾಧಿಸಿದರು. ನಾನು10 ಸಾವಿರ ಓಟುಗಳ ಅಂತರದಲ್ಲಿ ಸೋತೆ. ಇದು ನನ್ನ ರಾಜಕೀಯ ಜೀವನದ ತಿರುವಾಯಿತು. ಮುಂದೆ ನಾನು ಮುಖ್ಯಮಂತ್ರಿ ಅಗಲಸಮಾಜದಲ್ಲಿ ಸಮಾನತೆ ತರಬೇಕು ಇಲ್ಲವಾದರೆ ಸ್ವಾತಂತ್ರ್ಯಕ್ಕೆ ಬೆಲೆ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಆಂದ್ರ ಹಾಗೂ ತೆಲಂಗಾಣ ಸರ್ಕಾರದ ಜೊತೆ ಚರ್ಚಿಸಿ ನವಿಲೆ ಜಲಾಶಯ ನಿರ್ಮಾಣ ಮಾಡಲಾಗುವುದು.ಈ ಬಾರಿ ರೂ.3,71,381 ಕೋಟಿ ಆಯವ್ಯಯ ಮಂಡಿಸಲಾಗಿದೆ. ಕಳೆದ ವರ್ಷ ಬಸವಾರಜ್ ಬೊಮ್ಮಾಯಿ ಸರ್ಕಾರದಲ್ಲಿ ರೂ.3,09,000 ಕೋಟಿ ಆಯವ್ಯದ ಗಾತ್ರ ಇತ್ತು. ಸುಮಾರು ರೂ.60,000 ಕೋಟಿ ಬಜಟ್ ಗಾತ್ರ ಹೆಚ್ಚಾಗಿದೆ. ರೂ.36,000 ಕೋಟಿ ಪಂಚ ಗ್ಯಾರೆಂಟಿ ಯೋಜನಗಳಿಗೆ ಖರ್ಚು ಮಾಡಲಾಗಿದೆ. ಈ ಬಾರಿ ರೂ.52,000 ಕೋಟಿ ಗ್ಯಾರೆಂಟಿ ಯೋಜನೆಗಳಿಗೆ ಮೀಸಲು ಇರಿಸಲಾಗಿದೆ. ಇದರೊಂದಿಗೆ ರೂ.68,000 ಕೋಟಿ ಅಭಿವೃದ್ಧಿ ಕಾರ್ಯಗಳಿಗೆ ಇರಿಸಲಾಗಿದೆ. ಖಜಾನೆ ಖಾಲಿ ಆಗಲು ಬಿಡುವುದಿಲ್ಲ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮಾಡಲಾಗುವುದು. ಕೊಪ್ಪಳ ಜಿಲ್ಲೆಯ ಯಲಬುರ್ಗಾಕ್ಕೆ ರೂ.970 ಕೋಟಿ ಕಾರಟಗಿಗೆ ರೂ.203, ಅಂಜನಾದ್ರಿಗೆ ರೂ.100 ಕೋಟಿ ನೀಡಲಾಗಿದೆ. ಮುಂದಿನ ವರ್ಷ ಕನಕಗಿರಿ ದೇವಾಲಯ ಪ್ರಾಧಿಕಾರ ರಚನೆ ಮಾಡಲಾಗುವುದು. ಕೊಪ್ಪಳ ಜಿಲ್ಲೆ ಬಂದರೆ ನನ್ನ ಸ್ವಂತ ಕ್ಷೇತ್ರಕ್ಕೆ ಬಂದ ಅನುಭವ ಆಗುತ್ತದೆ. ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವದಲ್ಲಿ ನಂಬಿಕೆ ಹಾಗೂ ಬದ್ಧತೆ ಇದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್.ತಂಗಡಗಿ ಮಾತನಾಡಿ, ಕಳೆದ 3 ಉತ್ಸವಗಳಿಂದ ಅದ್ದೂರಿಯಾಗಿ 4ನೇ ಕನಕಗಿರಿ ಉತ್ಸವ ಆಯೋಜಿಸಲಾಗಿದೆ. ಈ ಮೂಲಕ ಹುನಚಪ್ಪ ನಾಯಕ ಪರಂಪರೆ ಇತಿಹಾಸ ನಾಡಿಗೆ ಸಾರಲಾಗುತ್ತಿದೆ. ಸಣ್ಣನೀರಾವರಿ ಸಚಿವನಿದ್ದಾಗ ಈ ಭಾಗದ 9 ಕೆರೆಗಳಿಗೆ ನೀರು ತುಂಬಿಸುವ ಮೂಲಕ ಒಣ ಬೇಸಾಯದ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಮೋಟರ್ ಕೆಟ್ಟು ಕೆರೆಗಳಿಗೆ ನೀರು ತುಂಬವ ಕಾರ್ಯ ನಿಂತಿತ್ತು. ರೂ.85 ಲಕ್ಷ ಖರ್ಚು ಮಾಡಿ ಮೋಟಾರ್ ರಿಪೇರಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ನೀರು ಹರಿಸಲಾಗುವುದು.

ಕನಕಗಿರಿ ಹೊಸ ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿ ಮಿನಿವಿಧಾನ ಸೌಧ ನಿರ್ಮಿಸಬೇಕು. ಎಲ್ಲಾ ಕಚೇರಿಗಳು ಬರಬೇಕು.

ಕನಕಚಾಲಪತಿ ದೇವಾಲಯ ಪ್ರಾಧಿಕಾರ ಮಾಡಿ ದೇವಾಲಯವನ್ನು ಪ್ರವಾಸೋಧ್ಯಮ ಇಲಾಖೆ ಸೇರಿಸಿ ಅಭಿವೃದ್ಧಿ ಮಾಡಬೇಕು. ನವಿಲಿ ಜಲಾಶಯ ಜೊತೆಗೆ ಇತರೆ ಜಲಾಶಗಳನ್ನು ನಿರ್ಮಿಸಿದರೆ ಈ ಭಾಗದ ಜನರಿಗೆ ಅನುಕೂಲವಾಗಿದೆ. ಕೃಷ್ಣಾ ಹಾಗೂ ತಂಗಾಭದ್ರ ನದಿ ಜೋಡಣೆ ಮಾಡಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ಅಂಜನಾದ್ರಿ ರೂ.100 ಕೋಟಿ ನೀಡಿದ್ದಾರೆ. ವರ್ಷದಲ್ಲೇ ಅಭಿವೃದ್ಧಿ ಕಾರ್ಯ ಮಾಡಿ ನಾಡಿಗೆ ತೋರಿಸಲಾಗಿದೆ. ಪ್ರತಿ ವರ್ಷವೂ ಕನಕಗರಿ ಉತ್ಸವ ಆಯೋಜಿಸಲಾಗುವುದು. ಕನಕಗಿರಿಯಲ್ಲಿ ತೋಟಗಾರಿಕೆ ಪಾರ್ಕ್ ನಿರ್ಮಿಸಲು ಜಾಗ ಗುರುತಿಸಲಾಗಿದೆ. ಮುಂದಿನ ಬಜಟ್‌ನಲ್ಲಿ ರೂ.10 ಕೋಟಿ ಮೀಸಲಿರಿಸಲಾಗುವುದು ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಬಸವಣ್ಣ ಅವರನ್ನು ರಾಯಭಾರಿ ಎಂದು ಘೋಷಿಸದೆ, ವಿಶ್ವಗುರು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಮುಖ್ಯಮಂತ್ರಿಗಳಿಗೆ ವೇದಿಕೆಯಲ್ಲಿ ಅಭಿನಂಧಿಸಿಲಾಯಿತು.

ವೇದಿಕೆಯಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ, ವಿರೋಧ ಪಕ್ಷದ ಮುಖ್ಯ ಸಚೇತನ ಹಾಗೂ ಶಾಸಕ ದೊಡ್ಡನಗೌಡ ಹನುಮನಗೌಡ ಪಾಟೀಲ್ , ಸಂಸದ ಕರಡಿ ಸಂಗಣ್ಣ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಜನಾರ್ಧನ್ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯ್ಕ್, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪುರ, ಮಾಜಿ ಸಚಿವರಾದ ಅಮರೇಗೌಡ ಬಯ್ಯಾಪುರ, ಇಕ್ಬಾಲ್ ಅನ್ಸಾರಿ, ಅಜಯ್ ನಾಗಭೂಷಣ್, ಸುವರ್ಣಗಿರಿ ಕ್ಷೇತ್ರದ ಡಾ.ಚನ್ನಮಲ್ಲ ಮಹಾಸ್ವಾಮೀಜಿ, ಸುಳೇಕಲ್‌ನ ಕಲ್ಮಠದ ಭುವನೇಶ್ವರ ದಿವ್ಯ ಸಾನಿಧ್ಯ ವಹಿಸಿದ್ದರು. ಕನಕಗಿರಿ ರಾಜವಂಶಸ್ಥ ರಾಜ ನವೀನ್‌ಚಂದ್ರ ನಾಯಕ ಹುಲಿ ಹೈದರ್, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿ.ಪಂ.ಸಿಇಓ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ಸುನೀಲ್ ವಂಟಗೋಡಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಗಳು ಇದ್ದರು.

## 6ನೇ ತರಗತಿ ವಸತಿ ಶಾಲೆಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ :** 2024-25 ನೇ ಸಾಲಿನ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಬೆಳಗಾವಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶ ಪಡೆಯಲು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಹಾಗೂ ಪಾಲಕರು ಮಾ.15 ಒಳಗಾಗಿ ಆನ್‌ಲೈನ್‌ನಲ್ಲಿ ಸೇವಾ ಸಿಂಧು ಪೋರ್ಟ್‌ಲ್ http://sevasindhuservices.karnataka.gov.in ಲಿಂಕ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಸಂಪರ್ಕಿಸಬಹುದು. ಉಚಿತವಾಗಿ ಸೇವೆಗಳನ್ನು ಪಡೆಯಲು ತಮ್ಮ ಸಮೀಪದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದು. ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸ್ವಿಕರಿಸುವುದಿಲ್ಲ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ. ಅಬ್ದುಲರಶೀದ ಎಮ್ ಮಿರ್ಜನ್ನವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧಾರ್ಮಿಕ ಮೌಲ್ಯಗಳ ಪುನರುತ್ಥಾನದಿಂದ ನೆಮ್ಮದಿ: ಶ್ರೀ ರಂಭಾಪುರಿ ಜಗದ್ಗುರುಗಳು




**ಹುಬ್ಬಳ್ಳಿ :** ಸರ್ವ ಸಮುದಾಯದ ಎಲ್ಲ ರಂಗಗಳಲ್ಲಿ ಧಾರ್ಮಿಕ ಮತು ಸಾಮಾಜಿಕ ಮೌಲ್ಯಗಳು ಕಲುಷಿತಗೊಳ್ಳುತ್ತಿವೆ. ಬೆಳೆಯುವ ಯುವ ಸಮುದಾಯದಲ್ಲಿ ಧಾರ್ಮಿಕ ಶ್ರದ್ಧೆ ಕಡಿಮೆಯಾಗಿ ಗುರು ಹಿರಿಯರ ಬಗೆಗೆ ಅನಾದರ ಭಾವನೆಗಳು ಬೆಳೆಯುತ್ತಿರುವ ಕಾರಣ ಬದುಕಿನಲ್ಲಿ ಶಾಂತಿ ನೆಮ್ಮದಿಯಿಲ್ಲದಂತಾಗಿದೆ. ಧಾರ್ಮಿಕ ಮೌಲ್ಯಗಳ ಸಂರಕ್ಷಣೆ ಮತ್ತು ಪುನರುತ್ಥಾನದಿಂದ ಜೀವನದಲ್ಲಿ ಶಾಂತಿ ಸಂತೃಪ್ತಿ ಪಡೆಯಲು ಸಾಧ್ಯವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಸೋಮವಾರ ತಾಲೂಕಿನ ಬಿಡನಾಳ-ಹಳ್ಳಿಯಾಳ ಗ್ರಾಮದ ಗಡಿ ಭಾಗದಲ್ಲಿ ನಿರ್ಮಿಸಿದ ಶ್ರೀ ಅಂಚಡಿ ಬಸವಣ್ಣ ನೂತನ ದೇವಸ್ಥಾನ ಉದ್ಘಾಟನೆ ಪ್ರಾಣ ಪ್ರತಿಷ್ಠಾಪನೆ ಕಳಸಾರೋಹಣ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ದೇವರು ಮತ್ತು ಧರ್ಮದಲ್ಲಿ ಶ್ರದ್ಧೆ ಇದ್ದರೆ ಜೀವನದಲ್ಲಿ ತೃಪ್ತಿ ಸಮಾಧಾನ ಇರುತ್ತದೆ. ದೇವರನ್ನು ನಂಬುವ ಆಸ್ತಿಕರು ದೇವರನ್ನು ನಂಬದ ನಾಸ್ತಿಕರೂ ಈ ಜಗದಲ್ಲಿ ಇದ್ದಾರೆ. ನಾವು ನಿಂತ ನೆಲ ಕುಡಿಯುವ ನೀರು ತಿನ್ನುವ ಅನ್ನ ಉಸಿರಾಡುವ ಗಾಳಿ ಕೊಟ್ಟ ಮಹಾದಾನಿ ಭಗವಂತ. ಅವನ ಸ್ಮರಣೆ ಅರ್ಚನೆ ಆರಾಧನೆಯಿಂದ ಮನುಷ್ಯನ ಬಾಳು ಉಜ್ವಲಗೊಳ್ಳಲು ಪ್ರೇರೇಪಣೆ ನೀಡುತ್ತದೆ. ರೈತ ಸಮುದಾಯಕ್ಕೆ ಬಸವಣ್ಣ ಆರಾಧ್ಯ ದೈವ. ಭೂಮಿಯನ್ನು ಉತ್ತಿ ಬಿತ್ತಿ ಬೆಳೆದು ರೈತನ ಬಾಳಿಗೆ ಬಲವನ್ನು ತಂದು ಕೊಡುವ ಬಸವಣ್ಣನ ಶ್ರಮ ಸಾಧನೆ ಸಣ್ಣದಲ್ಲ. ರೈತರು ತಮ್ಮ ಶ್ರಮದ ಬೆವರಿನಿಂದ ಸುಂದರ ದೇವಾಲಯ ನಿರ್ಮಿಸಿದ್ದು ಸಂತೋಷ ತಂದಿದೆ. ದೇಶಕ್ಕೆ ಅನ್ನ ಕೊಡುವ ರೈತರ ಸಮಸ್ಯೆಗಳನ್ನು ಪರಿಹರಿಸಿ ಆರ್ಥಿಕವಾಗಿ ಸದೃಢಗೊಳ್ಳಲು ಕೇಂದ್ರ-ರಾಜ್ಯ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಬೆಳೆದ ಬೆಳೆಗೆ ಯೋಗ್ಯ ಬೆಲೆ ದೊರಕಿಸಿಕೊಡಬೇಕೆಂದರು. ದೇವಾಲಯ ನಿರ್ಮಾಣಕ್ಕಾಗಿ ಶ್ರೀಮತಿ ಜಯಶ್ರೀ-ಗಿರೀಶಗೌಡ ಗದಿಗೆಪ್ಪಗೌಡರ ಕುಟುಂಬ ವರ್ಗದವರು ಐದು ಗುಂಟೆ ಭೂದಾನ ಮಾಡಿರುವುದು ಅವರಲ್ಲಿರುವ ಧರ್ಮ ಶ್ರದ್ಧೆಗೆ ಕಾರಣವಾಗಿದೆ ಎಂದು ಹೇಳಿ ಭೂದಾನಿಗಳಿಗೆ ಶಾಲು ಹೊದಿಸಿ ಸ್ಮರಣಿಕೆ ನೀಡಿ ಆಶೀರ್ವದಿಸಿದರು.


ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮತ್ತು ಶಿರಕೋಳ ಹಿರೇಮಠದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತವನ್ನಿತ್ತರು.

ಸಮಾರಂಭದಲ್ಲಿ ಬಸನಗೌಡ ನಾಗನಗೌಡ್ರ, ಗುರುನಾಥಗೌಡ ಮಾದಾಪುರ, ತುಬಾಕದ ಸಹೋದರರು, ಉಮೇಶಗೌಡ ಪಾಟೀಲ ಉಮೇಶ ಹೊಸಮನಿ ಮೊದಲಾದವರು ಪಾಲ್ಗೊಂಡಿದ್ದರು. ಬಿಡನಾಳ ಮತ್ತು ಹಳ್ಳಿಯಾಳ ಗ್ರಾಮದ ರೈತರು ಸಹಕರಿಸಿದ ದಾನಿಗಳನ್ನು ಸತ್ಕರಿಸಲಾಯಿತು. ಗಂಗಾಧರ ಮೇಟಿ ಸ್ವಾಗತಿಸಿ ನಿರೂಪಿಸಿದರು.

ಕಾರ್ಯಕ್ರಮದ ಸವಿ ನೆನಪಿಗಾಗಿ ಮತ್ತು ಪರಿಸರ ಸಂರಕ್ಷಣೆ ಸದುದ್ದೇಶದಿಂದ ಬಿಲ್ವಪತ್ರೆ ಸಸಿ ನೆಡಲಾಯಿತು.

ಕಾರ್ಯಕ್ರಮದ ನಂತರ ಅನ್ನ ದಾಸೋಹ ನೆರವೇರಿತು.

## ಶಾಂತವ್ವ ಜುಂಜಪ್ಪನವರ ನಿಧನ



**ಬನಹಟ್ಟಿ :** ನಗರದ ಸೋಮವಾರ ಪೇಟೆ ನಿವಾಸಿ ಶಾಂತವ್ವ ಜುಂಜಪ್ಪನವರ ತಮ್ಮ 75 ನೆಯ ವಯಸ್ಸಿನಲ್ಲಿ ಮಾರ್ಚ್ 4 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತಿ, ನಾಲ್ವರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು 'ಧಡಲ್ ಬಾಜಿ'ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State